ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಬೇರ್ಪಡಿಸಿ 1999–2000 ನೇ ಸಾಲಿನಿಂದ ಅಸ್ತಿತ್ವಕ್ಕೆ ತರಲಾಯಿತು. ಆಗ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಇದ್ದಂತಹ ಅಲ್ಪಸಂಖ್ಯಾತರ ಯೋಜನೆ/ಕಾರ್ಯಕ್ರಮಗಳನ್ನು ಅಲ್ಪಸಂಖ್ಯಾತರ ಇಲಾಖೆಗೆ ವರ್ಗಾಯಿಸಲಾಯಿತು. ಇಲಾಖೆಯು ಪ್ರಾರಂಭವಾಗಿ 15 ವರ್ಷ ಪೂರ್ಣಗೊಂಡಿರುವುದು. ಆದರೆ ಇಲಾಖಾ ಕಾರ್ಯಕ್ರಮಗಳಿಗೆ ಅಂದು ನಿಗದಿಪಡಿಸಿದ ಆದಾಯ ಮಿತಿಯನ್ನೇ ಈಗಲೂ ಸಹ ಅದೇ ಆದಾಯ ಮಿತಿಯನ್ನು ಅಳವಡಿಸಲಾಗುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಎಲ್ಲಾ ಸಾಮಗ್ರಿಗಳ ದರಗಳು ಹೆಚ್ಚಾಗಿದ್ದು, ಇದರಿಂದ ಅಂದು ನಿಗದಿಪಡಿಸಿದ ಆದಾಯಕ್ಕೆ ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳು/ಅಭ್ಯರ್ಥಿಗಳು ಅಲ್ಪಸಂಖ್ಯಾತರ ಇಲಾಖಾ ಕಾರ್ಯಕ್ರಮಗಳಿಗೆ/ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಪಡೆಯಲು ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ. ಇದರಿಂದ ಇಲಾಖಾ ಪ್ರಗತಿಯು ಕುಂಠಿತವಾಗಿದೆ. ಇತ್ತೀಚಿನ ದಿನಗಳಲ್ಲಿ ಆಗಿರುವ ಹಣದುಬ್ಬರವನ್ನು ಗಮನದಲ್ಲಿರಿಸಿಕೊಂಡು ಇಲಾಖಾ ಕಾರ್ಯಕ್ರಮಗಳಿಗೆ ಆದಾಯ ಮಿತಿಯನ್ನು ಹೆಚ್ಚಿಸಿದ್ದಲ್ಲಿ, ಅಲ್ಪಸಂಖ್ಯಾತರ ಸಮುದಾಯದ ಬಡವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಪಸಂಖ್ಯಾತರ ಯೋಜನೆಗಳ ಸೌಲಭ್ಯವನ್ನು ದೊರಕಿಸಿ ಕೊಡಲು ಸಾಧ್ಯವಾಗುವುದರಿಂದ, ಆದಾಯ ಮಿತಿಯನ್ನು ಹೆಚ್ಚಿಸಲು ಕೋರಿ ಮೇಲೆ ಓದಲಾದ ಕ್ರಸಂ. (1) ರಲ್ಲಿ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು. ಏಕಕಡತದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಕೂಲಂಕಶವಾಗಿ ಪರಿಶೀಲಿಸಿದ್ದು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆಯ ಮೇರೆಗೆ ಹಾಗೂ ಇತ್ತೀಚಿನ ವರ್ಷಗಳಲ್ಲಿ ಉಂಟಾಗಿರುವ ಹಣದುಬ್ಬರವನ್ನು ಗಮನದಲ್ಲಿರಿಸಿಕೊಂಡು ಅಲ್ಪಸಂಖ್ಯಾತರ ವರ್ಗಗಳಲ್ಲಿ ಬಡ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುವ ಹಿತದೃಷ್ಟಿಯಿಂದ ಇಲಾಖೆಯ ವಿವಿಧ ಕಾರ್ಯಕ್ರಮ/ಯೋಜನೆಗಳಲ್ಲಿನ ಸವಲತ್ತುಗಳನ್ನು ಪಡೆದುಕೊಳ್ಳುವ ಸಲುವಾಗಿ ಹಾಲಿ ನಿಗದಿಪಡಿಸಿರುವ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಪರಿಷ್ಕರಿಸಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: MWD 21 MDS 2011, ಬೆಂಗಳೂರು, ದಿನಾಂಕ: 02–08–2014

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಅಲ್ಪಸಂಖ್ಯಾತರ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ಯೋಜನೆ/ಕಾರ್ಯಕ್ರಮಗಳಿಗೆ ಫಲಾನುಭವಿಗಳಿಗೆ ಈಗಾಗಲೇ ನಿಗದಿಪಡಿಸಲಾಗಿದ್ದ ಕುಟುಂಬದ ವಾರ್ಷಿಕ ಆದಾಯ ಮಿತಿಗಳನ್ನು ಈ ಆದೇಶದ ಅನುಬಂಧದಲ್ಲಿರುವಂತೆ ತಕ್ಷಣದಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ ಆದೇಶಿಸಿದೆ.

ವಿವಿಧ ಕಾರ್ಯಕ್ರಮಗಳಡಿ ಫಲಾನುಭವಿಗಳ ಅರ್ಹತೆಗಾಗಿ ನಿಗದಿಪಡಿಸಿರುವ ವಾರ್ಷಿಕ ಆದಾಯದ ಮಿತಿಯನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ನಿಗದಿಪಡಿಸಿದ ನಮೂನೆಯಲ್ಲಿ ಪಡೆದು ಮಂಡಿಸುವ ಫಲಾನುಭವಿಗಳನ್ನು ಮಾತ್ರ ನಿಯಮಾನುಸಾರ ಪರಿಗಣಿಸತಕ್ಕದ್ದು. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿನ ಎಲ್ಲಾ ಯೋಜನೆಗಳಲ್ಲಿ ಮತೀಯ ಅಲ್ಪಸಂಖ್ಯಾತರ ಸಮುದಾಯಗಳಿಂದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಜನಾಂಗಗಳನ್ನು ಪರಿಗಣಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ–424 ವೆಚ್ಚ–3 2014, ದಿನಾಂಕ 03–07–2014 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ. ನಾಗರತ್ನ
ಸರ್ಕಾರದ ಉಪ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ : MWD 21 MDS 2011, ಬೆಂಗಳೂರು, ದಿನಾಂಕ 02-08-2014 ಕ್ಕೆ

ಅನುಬಂಧ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿವಿಧ ಕಾರ್ಯಕ್ರಮ/ಯೋಜನೆಗಳಿಗೆ ನಿಗದಿಪಡಿಸಿದ ಆದಾಯ ಮಿತಿಗಳ ವಿವರ

ಕ್ರಮ ಸಂಖ್ಯೆ	ಯೋಜನೆಗಳು	ನಿಗದಿಪಡಿಸಿರುವ ಆದಾಯ ಮಿತಿ	
		ಪ್ರವರ್ಗ-1ರಲ್ಲಿ ಬರುವ (ನದಾಫ್, ಪಿಂಜಾರ, ದರವೇಶ್, ಚಪ್ಪರಬಂದ್, ಕಸಾಬ, ಪೂಲ್‌ಮಾಲಿ, (ಮುಸ್ಲಿಂ)	ಪ್ರವರ್ಗ-2ಎ-ಭೌದ್ಧ ಸಮುದಾಯ ಪ್ರವರ್ಗ-2ಬಿ- ಮುಸ್ಲಿಂ ಸಮುದಾಯ ಪ್ರವರ್ಗ-3ಬಿ- ಕ್ರಿಶ್ಚಿಯನ್, ಜೈನ್ ಸಮುದಾಯ ಪಾರ್ಸಿ, ಸಿಖ್ ಸಮುದಾಯ
I.	**ಕೇಂದ್ರ ವಲಯ ಯೋಜನೆಗಳು :**	**ಕೇಂದ್ರ ಸರ್ಕಾರವು ನಿಗದಿ ಪಡಿಸಿರುವ ಆದಾಯದ ಮಿತಿಯಂತೆ**	
1.	ಅಲ್ಪಸಂಖ್ಯಾತರಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹ	1.00 ಲಕ್ಷ	1.00 ಲಕ್ಷ
2	ಅಲ್ಪಸಂಖ್ಯಾತರಿಗಾಗಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹ	2.00 ಲಕ್ಷ	2.00 ಲಕ್ಷ
3	ವೃತ್ತಿ ಮತ್ತು ತಾಂತ್ರಿಕ ಕೋರ್ಸ್‌ಗಳಿಗೆ ಅರ್ಹತೆ ಕಂ ಸಾಧನೆ ಆಧಾರಿತ	ಆದಾಯ ಮಿತಿಯಂತೆ ಪ್ರಸಕ್ತ ಮಿತಿ 2.50 ಲಕ್ಷ	ರೂ. 2.50 ಲಕ್ಷ
II.	**ರಾಜ್ಯ ವಲಯ ಯೋಜನೆಗಳು :**		
1.	ಕೌಶಲ್ಯ ಅಭಿವೃದ್ಧಿ ಯೋಜನೆ	ರೂ. 2.50 ಲಕ್ಷ	ರೂ. 2.00 ಲಕ್ಷ
2.	ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ	ರೂ. 2.00 ಲಕ್ಷ	ರೂ. 2.00 ಲಕ್ಷ
3.	ವಿದೇಶದಲ್ಲಿ ಉತ್ತನ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ	ರೂ. 4.50 ಲಕ್ಷ	ರೂ. 4.50 ಲಕ್ಷ
4.	ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ	ರೂ. 4.50 ಲಕ್ಷ	ರೂ. 3.50 ಲಕ್ಷ
5.	ಬಿದಾಯಿ	ರೂ. 1.50 ಲಕ್ಷ	ರೂ. 1.50 ಲಕ್ಷ
6.	ಅಲ್ಪಸಂಖ್ಯಾತರ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ ಮತ್ತು ತರಬೇತಿ	ರೂ. 3.00 ಲಕ್ಷ	ರೂ. 3.00 ಲಕ್ಷ
III.	**ಜಿಲ್ಲಾ ವಲಯ ಯೋಜನೆಗಳು :**		
1.	ಸರ್ಕಾರಿ ಅಲ್ಪಸಂಖ್ಯಾತರ ಎಲ್ಲಾ ವಿದ್ಯಾರ್ಥಿನಿಲಯಗಳ ಪ್ರವೇಶ	ರೂ. 1.00 ಲಕ್ಷ	ರೂ. 44,500/-
2.	ಮೊರಾರ್ಜಿ ದೇಸಾಯಿ ವಸತಿ/ಮುಸ್ಲಿಂ ವಸತಿ ಶಾಲೆಗಳು/ಕಾಲೇಜುಗಳು	ರೂ. 1.00 ಲಕ್ಷ	ರೂ. 1.00 ಲಕ್ಷ
3.	ಅಲ್ಪಸಂಖ್ಯಾತರ ಖಾಸಗಿ/ಅನುದಾನ ವಿದ್ಯಾರ್ಥಿನಿಲಯಗಳ ಪ್ರವೇಶ	ರೂ. 1.00 ಲಕ್ಷ	ರೂ. 1.00 ಲಕ್ಷ
4.	ಅಲ್ಪಸಂಖ್ಯಾತರಿಗಾಗಿ ಅನಾಥಾಲಯಗಳ ಪ್ರವೇಶಕ್ಕಾಗಿ		
	1. ಅನಾಥರು	ಆದಾಯ ಮಿತಿ ಇಲ್ಲ	ಆದಾಯ ಮಿತಿ ಇಲ್ಲ
	2. ನಿರ್ಗತಿಕರು	ರೂ. 1.00 ಲಕ್ಷ	ರೂ. 44,500-00 ಲಕ್ಷ

ಕ್ರಮ ಸಂಖ್ಯೆ	ಯೋಜನೆಗಳು	ನಿಗದಿಪಡಿಸಿರುವ ಆದಾಯ ಮಿತಿ	
		ಪ್ರವರ್ಗ–1ರಲ್ಲಿ ಬರುವ (ನದಾಫ್, ಪಿಂಜಾರ, ದರವೇಶ್, ಚಪ್ಪರಬಂದ್, ಕಸಾಬ, ಪೂಲ್‌ಮಾಲಿ, (ಮುಸ್ಲಿಂ)	ಪ್ರವರ್ಗ–2ಎ–ಬೌದ್ಧ ಸಮುದಾಯ ಪ್ರವರ್ಗ–2ಬಿ– ಮುಸ್ಲಿಂ ಸಮುದಾಯ ಪ್ರವರ್ಗ–3ಬಿ– ಕ್ರಿಶ್ಚಿಯನ್, ಜೈನ್ ಸಮುದಾಯ ಪಾರ್ಸಿ, ಸಿಖ್ ಸಮುದಾಯ
5.	ಕಾನೂನು ಪದವೀಧರರಿಗೆ ಶಿಷ್ಯವೇತನ	ರೂ. 3.50 ಲಕ್ಷ	ರೂ. 3.50 ಲಕ್ಷ
6.	ಐಟಿಐ/ಡಿಪ್ಲೋಮ ವಿದ್ಯಾರ್ಥಿಗಳಿಗೆ ಶಿಷ್ಯವೇತನ	ರೂ. 1.00 ಲಕ್ಷ	ರೂ. 1.00 ಲಕ್ಷ
7.	ಅಲ್ಪಸಂಖ್ಯಾತರಿಗಾಗಿ ವೃತ್ತಿಪರ ತರಬೇತಿ	ರೂ. 1.00 ಲಕ್ಷ	ರೂ. 1.00 ಲಕ್ಷ

ಎಂ. ನಾಗರತ್ನ
ಸರ್ಕಾರದ ಉಪ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

PR. 884
SC. 500

ನಗರಾಭಿವೃದ್ಧಿ ಸಚಿವಾಲಯ

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ತುರಹಳ್ಳಿ ಗ್ರಾಮದ ಸರ್ವೆ ನಂ. 50(ಪಿ) ಹಾಗೂ ಗುಬ್ಬಲಾಳ ಗ್ರಾಮದಲ್ಲಿ ನಿರ್ಮಿಸಿದ ಶ್ರೀ ಆಂಜನೇಯ ಸ್ವಾಮಿ ಗೃಹ ನಿರ್ಮಾಣ ಸಹಕಾರ ಸಂಘದ ಖಾಸಗಿ ಬಡಾವಣೆಯನ್ನು ಬಿಬಿಎಂಪಿ ಗೆ ಹಸ್ತಾಂತರಿಸುವ ಬಗ್ಗೆ.

ಓದಲಾಗಿದೆ: 1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪತ್ರ ಸಂ. ಬೆಂಅಪ್ರಾ/ಆಯುಕ್ತರು/ಅಸ/ಅಅ–1/ಟಿ–86/2014–15, ದಿನಾಂಕ 02–06–2014.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾಗಿರುವ ದಿನಾಂಕ 02–06–2014 ರ ಪ್ರಾಧಿಕಾರದ ಪ್ರಸ್ತಾವನೆಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ತುರಹಳ್ಳಿ ಗ್ರಾಮದ ಸರ್ವೆ ನಂ. 50(ಪಿ) ಹಾಗೂ ಗುಬ್ಬಲಾಳ ಗ್ರಾಮದ ಸರ್ವೆ ನಂ. 52/1ಪಿ ರಲ್ಲಿ ಒಟ್ಟು 5 ಎಕರೆ 10 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಶ್ರೀ ಆಂಜನೇಯ ಸ್ವಾಮಿ ಗೃಹ ನಿರ್ಮಾಣ ಸಹಕಾರ ಸಂಘದವರು ಖಾಸಗಿ ಬಡಾವಣೆಯನ್ನು ರಚಿಸಿದ್ದು, ಸದರಿ ಬಡಾವಣೆಯನ್ನು ಪ್ರಾಧಿಕಾರದ ಕಾರ್ಯಾದೇಶ ಸಂಖ್ಯೆ ಬೆಂಅಪ್ರಾ/ನಯೋಸ/ಪಿಎಲ್–45/2004/963/2010–11 ದಿನಾಂಕ 19–06–2010ರ ಆದೇಶದಡಿಯಲ್ಲಿ ಪ್ರಾಧಿಕಾರದಿಂದ ಅನುಮೋದನೆಯಾಗಿರುತ್ತದೆ. ಈ ಬಡಾವಣೆಯಲ್ಲಿಯ ಉದ್ಯಾನವನ ಹಾಗೂ ರಸ್ತೆ ಪ್ರದೇಶಗಳನ್ನು ಪ್ರಾಧಿಕಾರಕ್ಕೆ ಪರಿತ್ಯಾಜನಾ ಪತ್ರದ ಮೂಲಕ 12–04–2010 ರಂದು ಹಸ್ತಾಂತರಿಸಿರುತ್ತಾರೆಂದು ಪ್ರಾಧಿಕಾರದ ಆಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಬಡಾವಣೆಯ ಎಲ್ಲಾ ಮೂಲ ಸೌಲಭ್ಯ ಕಾಮಗಾರಿಗಳು ಪೂರ್ಣಗೊಂಡಿದ್ದು, ಬಡಾವಣೆಯ ಎಲ್ಲಾ 89 ನಿವೇಶನಗಳನ್ನು ಪ್ರಾಧಿಕಾರದಿಂದ ಬಿಡುಗಡೆಗೊಳಿಸಲಾಗಿರುವುದರಿಂದ ಹಾಗೂ ಸದರಿ ಬಡಾವಣೆಯನ್ನು ಮುಂದಿನ ಅಭಿವೃದ್ಧಿಗಾಗಿ ಹಾಗೂ ಉಸ್ತುವಾರಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲು ಆದೇಶ ನೀಡಬೇಕೆಂದು ಪ್ರಾಧಿಕಾರದ ಆಯುಕ್ತರು ತಮ್ಮ ಪತ್ರದಲ್ಲಿ ಕೋರಿರುತ್ತಾರೆ.

ಅದರಂತೆ ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 429 ಬೆಂಭೂಸ್ವಾ 2014, ಬೆಂಗಳೂರು, ದಿನಾಂಕ: 14–10–2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ತುರಹಳ್ಳಿ ಗ್ರಾಮದ ಸರ್ವೆ ನಂ. 50(ಪಿ) ಹಾಗೂ ಗುಬ್ಬಲಾಳ ಗ್ರಾಮದ ಸರ್ವೆ ನಂ. 52/1ಪಿ ರಲ್ಲಿ ಒಟ್ಟು 5 ಎಕರೆ 10 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಶ್ರೀ ಆಂಜನೇಯ ಸ್ವಾಮಿ ಗೃಹ ನಿರ್ಮಾಣ ಸಹಕಾರ ಸಂಘದವರು ರಚಿಸಿರುವ ಖಾಸಗಿ ಬಡಾವಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976 ಕಲಂ 30 (1)ರ ಮತ್ತು ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ ಕಲಂ 4 ರನ್ವಯ ಮುಂದಿನ ಅಭಿವೃದ್ಧಿ ಮತ್ತು ಉಸ್ತುವಾರಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಈ ಕೂಡಲೇ ಜಾರಿಗೆ ಬರುವಂತೆ ಹಸ್ತಾಂತರಿಸುವಂತೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್. ಗೋಪಾಲಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ನಗರಾಭಿವೃದ್ಧಿ ಇಲಾಖೆ

PR. 885
SC. 200

ಆರ್ಥಿಕ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಆಇ 67 ಆಖಇ 2001 (ಭಾ), ಬೆಂಗಳೂರು, ದಿನಾಂಕ: 13-11-2014

ಸರ್ಕಾರಿ ಆದೇಶ ಸಂಖ್ಯೆ : ಆಇ 67 ಆಖಇ 2001(ಭಾ) ದಿನಾಂಕ 19-09-2014 ರಲ್ಲಿನ ಪ್ರಸ್ತಾವನೆ ಭಾಗದ ಕೊನೆಯ ಕಂಡಿಕೆಯಲ್ಲಿ ನಮೂದಿತವಾಗಿರುವ "ಕೆ.ಟಿ.ಸಿ.-64" ರಲ್ಲಿ ಎಂಬ ಪದವನ್ನು "ಕೆ.ಟಿ.ಸಿ.-66" ರಲ್ಲಿ ಎಂದು 19-09-2014 ರಿಂದಲೇ ಜಾರಿಗೆ ಬರುವಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್. ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ
(ಆಡಳಿತ ಮತ್ತು ಮುಂಗಡ)

PR. 886

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಕೆ. ವಿಶ್ವನಾಥ್, ಪಿಎಸ್ಐ, ಡಿ.ಎಸ್.ಎ., ಎಫ್.ಪಿ.ಬಿ., ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಪರಿಷ್ಕರಣ ಮೇಲ್ಮನವಿಯ ಬಗ್ಗೆ ಅಂತಿಮ ಆದೇಶ.

ಓದಲಾಗಿದೆ:

1. ಶಿಸ್ತು ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು ಇವರ ಆದೇಶ ಸಂಖ್ಯೆ : ಡಿಇ/57/ಶಿಕ್ಷೆ/2014 (ಓ.ಬಿ. ಸಂಖ್ಯೆ : 190/2014) ದಿನಾಂಕ 11-02-2014.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರ ಆದೇಶ ಸಂಖ್ಯೆ : ಅಪೀಲು (4)/64/2013-14 (ಓ.ಬಿ. ಸಂಖ್ಯೆ : 06/2014-15) ದಿನಾಂಕ 14-05-2014.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 17-05-2014.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರ ಪತ್ರ ಸಂಖ್ಯೆ : ಅಪೀಲು (2)11/2014-15, ದಿನಾಂಕ 02-06-2014.
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 132 ಸಿಎನ್‌ಎಸ್ 2014, ದಿನಾಂಕ 03-11-2014.

ಪ್ರಸ್ತಾವನೆ:

ಶ್ರೀ ಕೆ. ವಿಶ್ವನಾಥ್, ಪಿಎಸ್ಐ, ಡಿ.ಎಸ್.ಎ., ಎಫ್.ಪಿ.ಬಿ., ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಈ ಹಿಂದೆ ತಲಘಟ್ಟಪುರ ಪೊಲೀಸ್ ಠಾಣೆ, ರಾಮನಗರ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965/89ರ ನಿಯಮ 7ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ದಿನಾಂಕ 02-02-2014 ರಂದು 16-30 ಗಂಟೆ ಸಮಯದಲ್ಲಿ ತಲಘಟ್ಟಪುರ ಪೊಲೀಸ್ ಠಾಣೆ ಸರಹದ್ದಿನ ಕಗ್ಗಲೀಪುರ ಗ್ರಾಮದಲ್ಲಿ, ಉತ್ತರಹಳ್ಳಿ ಹೋಬಳಿ, ಓಬಿಚೂಡಹಳ್ಳಿ ನಿವಾಸಿಯಾದ ಶ್ರೀ ಮೋಹನ ಎಂಬಾತನಿಗೆ ಸುನೀಲ್, ಕೇಶವ, ಮೂರ್ತಿ ಮತ್ತು ಇತರರು ಸೇರಿ ಹಳೆ ವೈಷಮ್ಯದಿಂದ ಮಾರಕಾಯುಧಗಳಿಂದ ಹಲ್ಲೆ ಮಾಡಿ ಕೊಲೆ ಮಾಡಲು ಪ್ರಯತ್ನಿಸಿದ್ದು, ಈ ಬಗ್ಗೆ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಮೊ.ಸಂ. 73/2014 ಕಲಂ 143, 147, 148, 324, 307, 435, 427, ರೆ/ವಿ 149 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ಆರೋಪಿತರು ಹಾಡುಹಗಲೇ ಲಾಂಗ್ ಮಚ್ಚುಗಳನ್ನು ಹಿಡಿದುಕೊಂಡು ಹಲ್ಲೆ ಮಾಡಿದ್ದನ್ನು ಖಂಡಿಸಿ ಜಯ ಕರ್ನಾಟಕ ಸಂಘ ಬೆಂಗಳೂರು ನಗರ ಜಿಲ್ಲಾಧ್ಯಕ್ಷರಾದ ಶ್ರೀ ಆರ್. ಚಂದ್ರಪ್ಪರವರ ನೇತೃತ್ವದಲ್ಲಿ ಸುಮಾರು 75 ಜನ ಕಾರ್ಯಕರ್ತರುಗಳು, ದಿನಾಂಕ 03-02-2014 ರಂದು ಪ್ರಕರಣದ ಪ್ರಮುಖ ಆರೋಪಿತರನ್ನು 24 ಗಂಟೆಯೊಳಗಾಗಿ ದಸ್ತಗಿರಿ ಮಾಡಬೇಕೆಂದು ತಲಘಟ್ಟಪುರ ಪೊಲೀಸ್ ಠಾಣೆ ಮುಂದೆ ಧರಣಿ ನಡೆಸಿ ನಂತರ ರಾಷ್ಟ್ರೀಯ ಹೆದ್ದಾರಿ ರಸ್ತೆ ತಡೆದು ಪ್ರತಿಭಟನೆ ನಡೆಸಿರುತ್ತಾರೆ.

ಸದರಿ ಮೇಲ್ಕಂಡ ಘಟನೆಯು ಹಾಡು ಹಗಲೇ ನಡೆದಿದ್ದು ನೀವು ಒಬ್ಬ ಜವಾಬ್ದಾರಿಯುತ ಪೊಲೀಸ್ ಅಧಿಕಾರಿಯಾಗಿದ್ದು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಹಾಗೂ ಸಾರ್ವಜನಿಕರಿಗೆ

ರಕ್ಷಣೆ ನೀಡುವಲ್ಲಿ ಸಂಪೂರ್ಣ ವಿಫಲರಾಗಿರುವುದು ಕಂಡುಬಂದಿರುವ, ಸದರಿಯವರು ಯಾವುದೇ ರೌಡಿಗಳ ಚಟುವಟಿಕೆಗಳನ್ನು ಹತ್ತಿಕ್ಕುವಲ್ಲಿ ಮುಂಜಾಗ್ರತೆ ಕ್ರಮ ವಹಿಸದೆ, ಘಟನಾ ಸ್ಥಳಕ್ಕೆ ಭೇಟಿ ನೀಡದೆ ತಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತೆ ತೋರಿರುವ ಹಾಗೂ ಈ ಘಟನೆ ಟಿವಿ ಮಾಧ್ಯಮಗಳಲ್ಲಿ ಸಹ ಪ್ರಸಾರವಾಗಲು ಕಾರಣರಾಗಿ, ಸಾರ್ವಜನಿಕರಿಗೆ ಪೊಲೀಸ್ ಇಲಾಖೆಯ ಬಗ್ಗೆ ಅಗೌರವ ಉಂಟಾಗಲು ಕಾರಣಕರ್ತರಾಗಿರುತ್ತೀರಿ. ಈ ಹಿನ್ನೆಲೆಯಲ್ಲಿ ಪೊಲೀಸ್ ಅಧೀಕ್ಷಕರು, ರಾಮನಗರ ಜಿಲ್ಲೆ ರವರು ಸಲ್ಲಿಸಲಾದ ಶಿಸ್ತು ಕ್ರಮದ ವರದಿ ಸಂಖ್ಯೆ : ಸಿಬ್ಬಂದಿ (2) ಶಿಕ್ಷೆ/4/2014, ದಿನಾಂಕ 03-02-2014 ನ್ನು ಕೂಲಂಕಷವಾಗಿ ಪರಿಶೀಲಿಸಿದೆ.

ತಲಘಟ್ಟಪುರ ಪೊಲೀಸ್ ಠಾಣೆ ಕಗ್ಗಲೀಪುರ ಗ್ರಾಮದಲ್ಲಿ, ಉತ್ತರಹಳ್ಳಿ ಹೋಬಳಿ, ಓಬಿಚೂಡಹಳ್ಳಿ ನಿವಾಸಿಯಾದ ಶ್ರೀ ಮೋಹನರವರಿಗೆ ಮಾರಣಾಂತಿಕ ಹಲ್ಲೆಯಾಗಿ ಅವರು ಹಾಲಿ ಸಾಯಿರಾಂ ಆಸ್ಪತ್ರೆ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಇಂತಹ ಗಂಭೀರ ಪ್ರಕರಣದಲ್ಲಿ ಇದುವರೆವಿಗೂ ಪ್ರಮುಖ ಆರೋಪಿಯನ್ನು ಬಂಧಿಸುವಲ್ಲಿ ವಿಫಲರಾಗಿದ್ದು ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತೆ, ಬೇಜವ್ದಾರಿತನ ಪ್ರದರ್ಶಿಸಿರುವ ಆರೋಪ.

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು, ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 11–02–2014ರ ಆದೇಶದಲ್ಲಿ ಇವರಿಗೆ ವಾಗ್ದಂಡನೆ ವಿಧಿಸಿ, ದಿನಾಂಕ 04–02–2014 ರಿಂದ ದಿನಾಂಕ 11–02–2014 ರವರೆಗಿನ ಅಮಾನತ್ತಿನ ಆದೇಶವನ್ನು "ರಜಾ ಅವಧಿಯೆಂದು" ಪರಿಗಣಿಸಿ ಆದೇಶಿಸಿರುತ್ತಾರೆ.

ಶಿಸ್ತು ಪ್ರಾಧಿಕಾರದ ಆದೇಶದ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ : (2) ರಲ್ಲಿ ಓದಲಾದ ದಿನಾಂಕ 14–05–2014ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಶ್ರೀ ಎಸ್.ಕೆ. ಸುರೇಶ್, ಸಿಪಿಸಿ ರವರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪ್ರಸ್ತುತ ಪ್ರಕರಣದಲ್ಲಿ ಆ.ಪೊ.ಅ. ರವರ ಮೇಲೆ ಹೊರೆಸಿರುವ ದೋಷಾರೋಪಣೆ ಹಾಗೂ ಸದರಿ ಅಧಿಕಾರಿಯ ಸಮಜಾಯಿಷಿಯನ್ನು ಅವಲೋಕಿಸಲಾಗಿದ್ದು, ಸದರಿಯವರಿಗೆ ವಿಧಿಸಿರುವ ದಂಡನೆಯು ಆರೋಪಕ್ಕೆ ತಕ್ಕುದಲ್ಲವಾಗಿರುವ ಹಿನ್ನೆಲೆಯಲ್ಲಿ ಪರಿಷ್ಕರಣ ಮೇಲ್ಮನವಿಯನ್ನು ಪುರಸ್ಕರಿಸುವ ಕುರಿತಂತೆ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 54 ಪೊಸಿಅ 2014, ಬೆಂಗಳೂರು, ದಿನಾಂಕ: 13–11–2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೆ. ವಿಶ್ವನಾಥ್, ಪಿಎಸ್ಐ, ಡಿ.ಎಸ್.ಎ., ಎಫ್.ಪಿ.ಬಿ., ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಶಿಸ್ತು ಪ್ರಾಧಿಕಾರದ ವಿಧಿಸಿರುವ "ವಾಗ್ದಂಡನೆ" ಆದೇಶವನ್ನು ರದ್ದುಪಡಿಸಿ, ಸದರಿಯವರು ದಿನಾಂಕ 04–02–2014 ರಿಂದ ದಿನಾಂಕ 11–02–2014 ರವರೆಗೆ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು "ಸಂಬಳ ಸಹಿತ ರಜೆ ಅವಧಿ" ಎಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಜೆ.ಡಿ. ಮಧುಚಂದ್ರ ತೇಜಸ್ವಿ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ
(ಪೊಲೀಸ್ ಸೇವೆಗಳು)

PR. 887

FOREST, ECOLOGY AND ENVIRONMENT SECRETARIAT

Subject : Diversion of 0.6096 ha. of forest land - in -Sy. No. 306, 308, 311, 318, 317, 319, 316 & 408 for construction of rising main and intermediate sump for drinking water supply project to Bhendwad - and 9 other villages in Raibag -Taluk, - Belgaum District in favour of the Executive Engineer, Panchayath Raj Engineering Division, Chikkodi-regarding.

READ : 1) Letter No.A5-(2) GFL.CR.18/2013-14, dated:-11/15-09-2014 of Principal Chief Conservator -of Forests (Head of Forest - Force), Bengaluru.

2) Government of India letter-No.F.No.11-9/98-FC, dated: 21-11-2005, 26/27-12-2007, 08-04-2009 and 13-02-2014.

PREAMBLE:

The Principal Chief Conservator of Forests, Bengaluru vide letter dated 11/15.09.2014 read at (1) above has submitted the proposal for diversion of 0.6096 ha. of forest land in Sy. No. 306, 308, 311, 318, 317, 319, 316 & 408 for construction of rising main and

intermediate sump for drinking water supply project to Bhendwad and 9 other villages - in Raibag Taluk, Belgaum District in favour of the Executive Engineer, Panchayath Raj Engineering Division, Chikkodi subject to certain conditions.

This proposal has. been examined as per the general approval of Government of India, vide its guidelines dated: - 21.11.2005, 26/27-12-2007, 08-04-2009 and 13-02-2014 and it has been decided to accord sanction for diversion of 0.6096 ha. of forest land under the Forest (Conservation) Act, 1980 and hence the order.

GOVERNMENT ORDER NO. FEE 124 FLL 2014, BENGALURU, DATED:19/11/2014.

In the circumstances explained in the preamble above and in accordance with the general approval given by Government of India in their guidelines dated: 21-11-2005, 26/27-12-2007, 08-04-2009 and 13-02-2014 Government are pleased to accord approval under Forest (Conservation) Act, 1980 for diversion of 0.6096 ha. of forest land in Sy. No. 306, 308, 311, 318, 317, 319, 316 & 408 for construction of rising main and intermediate sump for drinking water supply project to Bhendwad and 9 other villages in Raibag Taluk, Belgaum District in favour of the Executive Engineer, Panchayath Raj Engineering Division, Chikkodi subiect to the following conditions. --

The details of the forest land are as under:-

Sl.No.	Village & Survey No.	Purpose	Length X Breadth (Mts)	Extent (In ha.)
1	Raibag Sy. No. 306, 308, 311, 318,317, 319, 316 & 408	Construction of Intermediate Sump	40.00 X 30.00	0.1200
2		Construction of rising main	2448.00 X 2.00	0.4896
			Total	**0.6096**

1. The legal status of the forest land shall remain unchanged and it shall continue to be as forest land.
2. The lessee shall pay lease rent as fixed by the Government from time to time.
3. The lease tenure is 20 (twenty) years.
4. The leased out area should be used for the purpose for which it is granted. In case the land is not used for the stipulated purpose within one year or when it is no longer needed for the stipulated purpose, the area shall be resumed back. The concerned Chief Conservator of Forests/Deputy Conservator of Forests is authorized to take necessary action in this regard.
5. In case of any violations /stipulations agreed conditions reported during the lease period, the lease shall be liable for forfeiture under section 82 of Karnataka Forest Act, 1963. The concerned Chief Conservator of Forests is authorized to take necessary action in this regard.
6. No residential building shall be permitted in the proposed forest area.
7. The leased out area shall be demarcated on ground by fixing RCC pillars ar an interval of 20.00 Mtrs and the boundary shall be fenced with chain link mesh at the cost of the User Agency.
8. The Karnataka Forest Act 1963 and Rules 1969 and other relevant Acts and Rules will be applicable for any violation .
9. The User Agency has to pay the Net Present Value (NPV) of forest land diverted under this proposal as per conditions stipulated by Government of India, Ministry of Environment and Forests, New Delhi vide letter-No.111- 9/98-FC, dated: 13-02-2014 and orders dated 28/03/2008 and 09/05/2008 of the Hon'ble Supreme Court of India.
10. The User Agency shall ensure that there should be no damage to the available fauna and flora.
11. No labour camp shall be established on the forest lands.
12. Any damage to forest area due to such works shall be compensated by the User Agency. The extent of damage shall be assessed by the concerned Deputy Conservator of Forests.
13. The User Agency shall not sub-lease, mortgage or hypothecate the forest area.
14. The User Agency shall abide by all the conditions imposed upon by the Government of India, the Government of Karnataka and the Principal Chief Conservator of Forests (Head of Forest Force).

By Order and in the name of the Governor of Karnataka

L. SHARADA

Under Secretary to Government

Forest, Ecology and Environment Department.

PR. 888

SC. 100

ಕಂದಾಯ ಸಚಿವಾಲಯ

ವಿಷಯ: ಮಂಡ್ಯ ತಾಲ್ಲೂಕು, ಕೆರಗೋಡು ಹೋಬಳಿ, ಬಿ. ಹೊಸೂರು ಗ್ರಾಮದ ಸ.ನಂ. 48 ರಲ್ಲಿ 5.30 ಎಕರೆ ಹಾಗೂ ಜೀಗುಂಡಿಪಟ್ಟಣ ಗ್ರಾಮದ ಸ.ನಂ. 9 ರಲ್ಲಿ 4.10 ಎಕರೆ ಒಟ್ಟು 10.00 ಎಕರೆ ಜಮೀನನ್ನು ಕೇಂದ್ರೀಯ ವಿದ್ಯಾಲಯ ನಿರ್ಮಾಣಕ್ಕೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ ಇವರ ಪತ್ರ ಸಂ. ಎಲ್‌ಎನ್‌ಡಿ (1) 228/2010–11, ದಿನಾಂಕ 25.07.2014.

ಪ್ರಸ್ತಾವನೆ:

ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ಇವರು ಮಂಡ್ಯ ಜಿಲ್ಲೆ/ತಾಲ್ಲೂಕು, ಕೆರೆಗೋಡು ಹೋಬಳಿಯ ಬಿ. ಹೊಸೂರು ಗ್ರಾಮದ ಸ.ನಂ. 48ರಲ್ಲಿ 5.30 ಎಕರೆ ಹಾಗೂ ಜೀಗುಂಡಿಪಟ್ಟಣ ಗ್ರಾಮದ ಸ.ನಂ. 9 ರಲ್ಲಿ 4.10 ಎಕರೆ ಒಟ್ಟು 10.00 ಎಕರೆ ಜಮೀನನ್ನು ಕೇಂದ್ರೀಯ ವಿದ್ಯಾಲಯ ನಿರ್ಮಾಣಕ್ಕೆ ಮಂಜೂರು ಮಾಡುವಂತೆ ಕೋರಿರುತ್ತಾರೆ.

2. ಸದರಿ ಜಮೀನಿನ ಆರ್.ಟಿ.ಸಿ. ಯಲ್ಲಿ ಗೋಮಾಳ ಎಂಬುದಾಗಿ ನಮೂದು ಇದ್ದು, ಪ್ರಸ್ತುತ ಗೋಮಾಳ ಸ್ವರೂಪವನ್ನು ಕಳೆದುಕೊಂಡಿರುತ್ತದೆ. ಈ ಬಗ್ಗೆ ನ್ಯಾಯಾಲಯದಲ್ಲಿ ಯಾವುದೇ ನ್ಯಾಯಾಲಯ ಪ್ರಕರಣ ದಾಖಲಾಗಿರುವುದಿಲ್ಲ. ಪ್ರಸ್ತಾಪಿತ ಜಮೀನಿನಲ್ಲಿ ಮಹಾತ್ಮ ಗಾಂಧಿ ಕ್ಷಯ ರೋಗ ಆಸ್ಪತ್ರೆಯಿದ್ದು, ಕಟ್ಟಡ ಸಹಾ ಇರುತ್ತದೆ. ಇದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನಕ್ಕೆ ಒಳಪಟ್ಟಿದ್ದು, ಸದರಿ ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಗಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಭಿಪ್ರಾಯದಂತೆ ಆಸ್ಪತ್ರೆಯ ಕಟ್ಟಡಗಳಿಗೆ ಸಂಪರ್ಕಿಸಲು 60 ಅಡಿ ರಸ್ತೆಗೆ ಜಾಗವನ್ನು ಬಿಟ್ಟುಕೊಡಲು ಷರತ್ತು ವಿಧಿಸಿ ಮಂಜೂರು ಮಾಡಬಹುದಾಗಿ ಅಭಿಪ್ರಾಯ/ಸಹಮತಿ ನೀಡಿರುತ್ತದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 59 ಎಲ್‌ಜಿವೈ 2014, ಬೆಂಗಳೂರು, ದಿನಾಂಕ: 26–11–2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತಾಪಿತ ಜಮೀನಿನಲ್ಲಿ ಮಹಾತ್ಮ ಗಾಂಧಿ ಕ್ಷಯ ರೋಗ ಆಸ್ಪತ್ರೆಯಿದ್ದು, ಸದರಿ ಆಸ್ಪತ್ರೆಗೆ ಸಂಪರ್ಕಿಸಲು 60 ಅಡಿ ರಸ್ತೆಗೆ ಜಾಗವನ್ನು ಬಿಟ್ಟುಕೊಡುವ ಷರತ್ತಿಗೊಳಪಟ್ಟು ಮಂಡ್ಯ ತಾಲ್ಲೂಕು, ಕೆರಗೋಡು ಹೋಬಳಿ, ಬಿ. ಹೊಸೂರು ಗ್ರಾಮದ ಸ.ನಂ. 48 ರಲ್ಲಿ 5.30 ಎಕರೆ ಹಾಗೂ ಜೀಗುಂಡಿಪಟ್ಟಣ ಗ್ರಾಮದ ಸ.ನಂ. 9 ರಲ್ಲಿ 4.10 ಎಕರೆ ಒಟ್ಟು 10.00 ಎಕರೆ ಜಮೀನನ್ನು ಕೇಂದ್ರೀಯ ವಿದ್ಯಾಲಯ ನಿರ್ಮಾಣಕ್ಕೆ ವರ್ಗಾವಣೆ ಮಾಡಲು ಅನುಮೋದನೆ ನೀಡಲಾಗಿದೆ.

1) ಮಂಜೂರಾದ ಭೂಮಿಯನ್ನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಎರಡು ವರ್ಷಗಳ ಅವಧಿಯೊಳಗೆ ಉಪಯೋಗಿಸತಕ್ಕದ್ದು.
2) ಮಂಜೂರಾದ ಭೂಮಿಯನ್ನು ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಬಳಸತಕ್ಕದ್ದಲ್ಲ.
3) ಮಂಜೂರಾದ ಜಮೀನಿನಲ್ಲಿ ಯಾವುದೇ ರೀತಿಯ ಅತಿಕ್ರಮಣವಾಗದಂತೆ ಕ್ರಮವಹಿಸತಕ್ಕದ್ದು.
4) ಮಂಜೂರು ಮಾಡಲ್ಪಡುವ ಜಮೀನಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ದಾವೆಗಳು ದಾಖಲಾಗಿದ್ದಲ್ಲಿ, ಈ ಮಂಜೂರಾತಿಯು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.
5) ಮಂಜೂರಾದ ಜಮೀನನ್ನು ಕಂದಾಯ ಇಲಾಖೆಯ ಅನುಮತಿ ಇಲ್ಲದೆ ಮಾರಾಟ ಮಾಡುವುದಾಗಲೀ, ಗುತ್ತಿಗೆ/ಉಪಗುತ್ತಿಗೆ ನೀಡುವುದಾಗಲೀ, ಅಡಮಾನ, ವರ್ಗಾವಣೆ, ದಾನ, ಇತರೆ ಯಾವುದೇ ರೀತಿಯ ಪರಭಾರೆಯನ್ನು ಮಾಡಬಾರದು.
6) ಮಂಜೂರಾದ ಜಮೀನಿನ ಯಾವುದೇ ಭಾಗವು ಸಾರ್ವಜನಿಕ ಉದ್ದೇಶಕ್ಕೆ ಅಗತ್ಯವಾಗಿದ್ದಲ್ಲಿ ಸರ್ಕಾರವು ಸದರಿ ಜಮೀನನ್ನು ಪರಿಹಾರ ನೀಡದೇ ಹಿಂತೆಗೆದುಕೊಳ್ಳುವ ಹಕ್ಕನ್ನು ಹೊಂದಿರುತ್ತದೆ.
7) ಮಂಜೂರಾದ ಜಮೀನು ಸಂಸ್ಥೆಗೆ ಅವಶ್ಯವಿಲ್ಲವೆಂದು ಕಂಡುಬಂದಲ್ಲಿ ಕಂದಾಯ ಇಲಾಖೆಗೆ ಹಿಂತಿರುಗಿಸತಕ್ಕದ್ದು.
8) ಮಂಜೂರಾದ ಜಮೀನು 1969ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಿಗೆ ಬದ್ಧವಾಗಿದ್ದು, ಸದರಿ ನಿಯಮಗಳ ಉಲ್ಲಂಘನೆಯಾದಲ್ಲಿ ಈ ಮಂಜೂರಾತಿ ಆದೇಶ ತನ್ನಷ್ಟಕ್ಕೆ ತಾನೇ ರದ್ದಾಗುವುದು ಹಾಗೂ ಯಾವುದೇ ಪರಿಹಾರ ನೀಡದೇ ಮಂಜೂರಾದ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲಾಗುವುದು.
9) ಜಿಲ್ಲಾಧಿಕಾರಿಗಳು ಮಂಜೂರಾದ ಜಮೀನನ್ನು ಫಲಾನುಭವಿಗಳಿಗೆ ಹಸ್ತಾಂತರಿಸುವಾಗ ಮಂಜೂರಾದ ಪ್ರದೇಶದ ವಾಸ್ತವ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಪೂರಕವಾದ ಷರತ್ತುಗಳನ್ನು ವಿಧಿಸಬಹುದಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಉದಯ ಆರ್. ನಾಯಕ್

ಪೀಠಾಧಿಕಾರಿ

ಕಂದಾಯ ಇಲಾಖೆ (ಭೂ.ಮಂ–2)

PR. 889

SC. 25

ಕಾನೂನು ಸಚಿವಾಲಯ

ವಿಷಯ : ಬಿಜಾಪುರ ಜಿಲ್ಲೆ ಇಂಡಿ ಕಂದಾಯ ತಾಲ್ಲೂಕಿನಲ್ಲಿ ಹೊಸದಾಗಿ ಸೃಜಿಸಿರುವ ಒಂದು ನೋಟರಿ ಹುದ್ದೆಯನ್ನು ತುಂಬುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ : ಲಾ 121 ಎಲ್‌ಸಿಎಲ್ 2012, ದಿನಾಂಕ : 21–10–2013.
2. ಸರ್ಕಾರದ ಪತ್ರ ಸಂಖ್ಯೆ : ಲಾ 13 ಎಲ್‌ಸಿಎಲ್ 2014, ದಿನಾಂಕ : 13–02–2014.
3. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಿಜಾಪುರ ಜಿಲ್ಲೆ, ದಿನಾಂಕ : 30–05–2014.
4. ನೋಟರಿಗಳ ತಿದ್ದುಪಡಿ ನಿಯಮಗಳು 2009ರ ಅಧಿಸೂಚನೆ ಸಂಖ್ಯೆ : ಜಿಎಸ್‌ಆರ್ 114(ಎ), ದಿನಾಂಕ : 24–02–2009.
5. ಸಂದರ್ಶನ ಮಂಡಳಿ ರಚನೆ ಅಧಿಸೂಚನೆ ಸಂಖ್ಯೆ : ಲಾ 61 ಎಲ್‌ಸಿಎಲ್ 2009, ದಿನಾಂಕ : 24–07–2010 ಮತ್ತು ಲಾ 53 ಎಲ್‌ಸಿಎಲ್ 2013, ದಿನಾಂಕ : 23–07–2013.
6. ಸಂದರ್ಶನ ಸೂಚನಾ ಪತ್ರ ಸಂಖ್ಯೆ : ಲಾ 13 ಎಲ್‌ಸಿಎಲ್ 2014, ದಿನಾಂಕ : 25–08–2014.

ಪ್ರಸ್ತಾವನೆ :

ಮೇಲೆ (1)ರ ಓದಲಾದ ದಿನಾಂಕ : 21–10–2013ರ ಸರ್ಕಾರದ ಆದೇಶದಲ್ಲಿ ಬಿಜಾಪುರ ಜಿಲ್ಲೆಯ ಇಂಡಿ ಕಂದಾಯ ತಾಲ್ಲೂಕಿಗೆ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಿದ್ದು, ಸದರಿ ಹುದ್ದೆಯನ್ನು ಭರ್ತಿ ಮಾಡಲು ಸ್ಥಳೀಯರಿಂದ ಅರ್ಜಿಗಳನ್ನು ಆಹ್ವಾನಿಸಿ ನೋಟರಿಗಳ ಅಧಿನಿಯಮ / ನಿಯಮಗಳು ಹಾಗೂ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತು) ನಿಯಮಗಳು 1977ರ ನಿಯಮ 12 ರಡಿಯಲ್ಲಿ ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಿಜಾಪುರ ಜಿಲ್ಲೆ ಇವರನ್ನು ದಿನಾಂಕ : 13–02–2014 ರಂದು ಕೋರಲಾಗಿತ್ತು.

ಅದರಂತೆ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶಕರು, ಬಿಜಾಪುರ ಜಿಲ್ಲೆ ಇವರು ಮೇಲೆ ಓದಲಾದ (3)ರಲ್ಲಿ ದಿನಾಂಕ : 30–05–2014ರಲ್ಲಿ 14 ಜನರ ಮೆಮೋರಿಯಲ್ಸ್‌ಗಳನ್ನೊಳಗೊಂಡ ಪ್ರಸ್ತಾವನೆಯನ್ನು ಸಲ್ಲಿಸಿದ್ದರು. ಆ ಪ್ರಸ್ತಾವನೆಯನ್ನು ಮೇಲೆ ಓದಲಾದ (4)ರಲ್ಲಿ ನೋಟರಿಗಳ ತಿದ್ದುಪಡಿ ನಿಯಮಗಳು 2009ರನ್ವಯ ಕರ್ನಾಟಕ ರಾಜ್ಯದಿಂದ ನೋಟರಿಗಳ ನೇಮಕಕ್ಕಾಗಿ ಮೇಲೆ ಓದಲಾದ (5)ರ ಅಧಿಸೂಚನೆಗಳಲ್ಲಿ ರಚಿಸಲಾಗಿರುವ ಸಂದರ್ಶನ ಮಂಡಳಿಯ ಪರಿಶೀಲನೆಗೆ ಕಳುಹಿಸಿ ಎಲ್ಲಾ ಅಭ್ಯರ್ಥಿಗಳನ್ನು ಸಂದರ್ಶನ ಮಂಡಳಿಯ ಮುಂದೆ ಸಂದರ್ಶನಕ್ಕೆ ಹಾಜರಾಗುವಂತೆ ಮೇಲೆ ಓದಲಾದ (6)ರ ದಿನಾಂಕ : 25–08–2014ರಲ್ಲಿ ಸಂದರ್ಶನ ಸೂಚನಾ ಪತ್ರದಲ್ಲಿ ಸೂಚಿಸಲಾಗಿತ್ತು. ಅದರಂತೆ, ಸಂದರ್ಶನ ಮಂಡಳಿಯು ಸಂದರ್ಶನ ನಡೆಸಿ ವರದಿ ಸಲ್ಲಿಸಿದೆ.

ಸಂದರ್ಶನ ಮಂಡಳಿಯ ಶಿಫಾರಸ್ಸನ್ನು ಸರ್ಕಾರವು ಪರಿಗಣಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಲಾ 13 ಎಲ್‌ಸಿಎಲ್ 2014, ಬೆಂಗಳೂರು, ದಿನಾಂಕ : 30–10–2014.

ನೋಟರಿಗಳ ಅಧಿನಿಯಮ, 1952 ಹಾಗೂ ಇದರ ಅಡಿಯಲ್ಲಿ ರಚಿಸಲಾಗಿರುವ ನೋಟರಿಗಳ ನಿಯಮಗಳು, 1956 ಹಾಗೂ ನಂತರದ ತಿದ್ದುಪಡಿ ನಿಯಮಗಳನ್ವಯ ಪರಿಶೀಲಿಸಿ, ನಿಯಮ 8(1)ರಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ ಶ್ರೀ ಸಿದ್ರಾಮ ಶರಣಪ್ಪ ಪೂಜಾರಿ, ವಕೀಲರು, ಸನ್ ಆಫ್ ಶ್ರೀ ಶರಣಪ್ಪ ಪೂಜಾರಿ, ಬಹಾರ್ ಪೇಟೆ ಗಲ್ಲಿ, ಇಂಡಿ–586209, ಬಿಜಾಪುರ ಜಿಲ್ಲೆ ಇವರನ್ನು ವೃತ್ತಿ ಪ್ರಮಾಣ ಪತ್ರ ನೀಡಲಾದ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಬಿಜಾಪುರ ಜಿಲ್ಲೆಯ ಇಂಡಿ ಕಂದಾಯ ತಾಲ್ಲೂಕಿನ ನೋಟರಿಯನ್ನಾಗಿ ನೇಮಿಸಿದೆ.

ಸದರಿ ವಕೀಲರು ಲೆಕ್ಕ ಶೀರ್ಷಿಕೆ 0070–ಇತರೆ ಆಡಳಿತಾತ್ಮಕ ಸೇವೆಗಳು–01–ನ್ಯಾಯ ಪರಿಪಾಲನೆ–501–0–ಇತರೆ ಸ್ವೀಕೃತಿಗಳು–06 ಇತರೆ ಬಾಬ್ತುಗಳಿಗೆ (0070–01–501–0–06) ನೋಟರಿ ನಿಯಮಗಳಲ್ಲಿ ನಿಗಧಿಪಡಿಸಲಾದ ರೂ. 1000–00 (ಒಂದು ಸಾವಿರಗಳು ಮಾತ್ರ) ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಜಮಾ ಮಾಡಿ ಆ ಬಗೆಗಿನ ಮೂಲ ಚಲನ್ ಮತ್ತು ಹುಟ್ಟಿದ ದಿನಾಂಕವನ್ನು ದೃಢೀಕರಿಸಬಲ್ಲ ದಾಖಲೆಯನ್ನು ಹಾಜರುಪಡಿಸಿದ ನಂತರ ಅವರಿಗೆ ವೃತ್ತಿ ಪ್ರಮಾಣ ಪತ್ರ ನೀಡಲಾಗುವುದು.

ವೃತ್ತಿ ಪ್ರಮಾಣ ಪತ್ರ ನೀಡಿದ ನಂತರ ಶ್ರೀಯುತರ ಹೆಸರನ್ನು ನೋಟರಿ ಅಧಿನಿಯಮ, 1952ರ ಕಲಂ 4ನೇ ಪ್ರಕರಣದಡಿ ಸರ್ಕಾರ ನಿರ್ವಹಿಸುತ್ತಿರುವ ಪಟ್ಟಿಯಲ್ಲಿ ನಮೂದಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ. ಲಕ್ಷ್ಮಣ

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),

ಕಾನೂನು ಇಲಾಖೆ (ಆಡಳಿತ–2).

P.R. 817

SC-25

ಕಾನೂನು ಸಚಿವಾಲಯ

ವಿಷಯ : ಬೀಳಗಿ ಕಂದಾಯ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇಲ್ಲಿಗೆ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ : ಲಾ 142 ಎಲ್‌ಸಿಎಲ್ 2013, ದಿನಾಂಕ : 26–08–2013.
2. ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ ಜಿಲ್ಲೆರವರ ಪತ್ರ ದಿನಾಂಕ : 06–02–2014.
3. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಜಿಲ್ಲೆರವರ ಪತ್ರ ದಿನಾಂಕ : 25–09–2014.

ಪ್ರಸ್ತಾವನೆ :

ಮೇಲೆ ಓದಲಾದ (1)ರ ದಿನಾಂಕ : 26–08–2013ರ ಪತ್ರದಲ್ಲಿ ಬಾಗಲಕೋಟೆ ಜಿಲ್ಲೆಯ ಬೀಳಗಿ ಕಂದಾಯ ತಾಲ್ಲೂಕಿಗೆ ಹಾಲಿ ಇರುವ 03 ನೋಟರಿಗಳಿಗೆ ಹೆಚ್ಚಿನ ಕೆಲಸದ ಒತ್ತಡವಿರುವ ಬಗ್ಗೆ ಹಾಗೂ ಇನ್ನೂ ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವ ಅವಶ್ಯಕತೆ ಇದೆಯೇ ಎಂಬ ಬಗ್ಗೆ ಸಮರ್ಥನೀಯ ವಿವರಣೆಯನ್ನು ಒದಗಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಜಿಲ್ಲೆ ಮತ್ತು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರುಗಳನ್ನು ಕೋರಲಾಗಿತ್ತು.

ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರು ಮೇಲೆ ಓದಲಾದ (2)ರ ದಿನಾಂಕ : 06–02–2014ರ ಪ್ರಸ್ತಾವನೆಯೊಂದಿಗೆ, ತಹಶೀಲ್ದಾರರು, ಬೀಳಗಿ ಇವರಿಂದ ಪಡೆದ ವರದಿಯನ್ನು ಲಗತ್ತಿಸಿ, ಸದರಿ ವರದಿಯಲ್ಲಿಯಂತೆ ಬೀಳಗಿ ತಾಲ್ಲೂಕಿನಲ್ಲಿ ಕೇಂದ್ರ ಸರ್ಕಾರದಿಂದ ಯಾವುದೇ ನೋಟರಿಗಳು ನೇಮಕಗೊಂಡಿರುವುದಿಲ್ಲವೆಂದೂ, ಇರುವ 03 ರಾಜ್ಯ ಸರ್ಕಾರದಿಂದ ನೇಮಕಗೊಂಡ ನೋಟರಿಗಳಿಗೆ ಕೆಲಸದ ಒತ್ತಡ ಜಾಸ್ತಿಯಿರುವುದರಿಂದ, ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವ ಅವಶ್ಯಕತೆ ಇದೆ ಎಂದು ವರದಿಯನ್ನು ನೀಡಿರುತ್ತಾರೆ.

ಅದರಂತೆ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಜಿಲ್ಲೆ ಇವರು ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಬೀಳಗಿ ಇವರ ವರದಿಯನ್ನು ಲಗತ್ತಿಸಿ, ಮೇಲೆ ಓದಲಾದ (3)ರಲ್ಲಿ ದಿನಾಂಕ : 25–09–2014ರ ಪತ್ರದಲ್ಲಿ ಬೀಳಗಿ ಕಂದಾಯ ತಾಲ್ಲೂಕಿನಲ್ಲಿ ರಾಜ್ಯ ಸರ್ಕಾರದಿಂದ ನೇಮಕಗೊಂಡ 03 ನೋಟರಿಗಳಿದ್ದು, ಮತ್ತೊಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವಂತೆ ಕೋರಿರುತ್ತಾರೆ.

ಮೇಲಿನ ವರದಿಗಳನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಲಾ 142 ಎಲ್‌ಸಿಎಲ್ 2013, ಬೆಂಗಳೂರು, ದಿನಾಂಕ : 03–11–2014.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಬಾಗಲಕೋಟೆ ಜಿಲ್ಲೆಯ ಬೀಳಗಿ ಕಂದಾಯ ತಾಲ್ಲೂಕಿಗೆ ಸಾರ್ವಜನಿಕರ ಹಿತದೃಷ್ಟಿಯಿಂದ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

P.R. 818

SC-25

ಜಿ. ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),
ಕಾನೂನು ಇಲಾಖೆ (ಆಡಳಿತ–2).

ಕಾನೂನು ಸಚಿವಾಲಯ

ವಿಷಯ : ಧಾರವಾಡ ಕಂದಾಯ ತಾಲ್ಲೂಕು, ಧಾರವಾಡ ಜಿಲ್ಲೆ ಇಲ್ಲಿಗೆ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವ ಬಗ್ಗೆ

ಓದಲಾಗಿದೆ :
1) ಸರ್ಕಾರದ ಪತ್ರ ಸಂಖ್ಯೆ: ಲಾ 241 ಎಲ್‌ಸಿಎಲ್ 2014, ದಿನಾಂಕ: 09–06–2014
2) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಜಿಲ್ಲೆ ರವರ ಪತ್ರ ದಿನಾಂಕ: 09–07–2014
3) ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ ಜಿಲ್ಲೆರವರ ಪತ್ರ ದಿನಾಂಕ: 01–10–2014

ಪ್ರಸ್ತಾವನೆ:

ಸರ್ಕಾರವು ರಾಜ್ಯದ ಎಲ್ಲಾ ಕಂದಾಯ ತಾಲ್ಲೂಕುಗಳಿಗೆ ಒಂದೊಂದು ನೋಟರಿ ಹುದ್ದೆಯನ್ನು ಸೃಜಿಸಲು ತೀರ್ಮಾನಿಸಿದ್ದು, ಅದರಂತೆ, ಮೇಲೆ ಓದಲಾದ (1)ರ ದಿನಾಂಕ: 09–06–2014ರ ಪತ್ರದಲ್ಲಿ ಧಾರವಾಡ ಜಿಲ್ಲೆಯ ಧಾರವಾಡ ಕಂದಾಯ ತಾಲ್ಲೂಕಿನಲ್ಲಿ ಹಾಲಿ ಇರುವ 05 ನೋಟರಿಗಳಿಗೆ ಹೆಚ್ಚಿನ ಕೆಲಸದ ಒತ್ತಡವಿರುವ ಬಗ್ಗೆ ಹಾಗೂ ಇನ್ನೂ ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವ ಅವಶ್ಯಕತೆ ಇದೆಯೇ ಎಂಬ ಬಗ್ಗೆ ಸಮರ್ಥನೀಯ ವಿವರಣೆಯನ್ನು ಒದಗಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಜಿಲ್ಲೆ ಮತ್ತು ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರುಗಳನ್ನು ಕೋರಲಾಗಿತ್ತು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಜಿಲ್ಲೆ ಇವರು ಮೇಲೆ ಓದಲಾದ (2)ರ ದಿನಾಂಕ: 09–07–2014ರ ಪತ್ರದಲ್ಲಿ ಧಾರವಾಡ ತಾಲ್ಲೂಕಿನಲ್ಲಿ 05 ಜನ ನೋಟರಿಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಒಟ್ಟು ಜನ ಸಂಖ್ಯೆಯು 2,18,961 ಕ್ಕಿಂತ ಹೆಚ್ಚಿಗೆ ಇದ್ದು, 126 ಹಳ್ಳಿಗಳನ್ನು ಒಳಗೊಂಡಿದ್ದು, ಧಾರವಾಡ ಜಿಲ್ಲಾ ಕೇಂದ್ರವಾಗಿದ್ದು, ಜಿಲ್ಲಾ ನ್ಯಾಯಾಲಯಗಳು ಮತ್ತು ಹಿರಿಯ ಹಾಗೂ ಕಿರಿಯ ದಿವಾಣಿ ನ್ಯಾಯಾಲಯಗಳು, ಜಿಲ್ಲಾಧಿಕಾರಿಗಳ ಕಛೇರಿ, ಕರ್ನಾಟಕ ವಿಶ್ವವಿದ್ಯಾನಿಲಯ, ಕೃಷಿ ವಿಶ್ವವಿದ್ಯಾನಿಲಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಎಲ್ಲಾ ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು, ಇದರಿಂದ ನ್ಯಾಯಾಲಯಕ್ಕೆ ಬರುವ ಸಾರ್ವಜನಿಕರ ಸಂಖ್ಯೆಯು ಹೆಚ್ಚಾಗುತ್ತಿದ್ದು, ಕರಾರು ಪತ್ರ ಪ್ರಮಾಣ ಪತ್ರ ಇತರೆ ನೋಟರಿ ಕಾರ್ಯಗಳು ಹೆಚ್ಚಿಗೆ ಆಗುತ್ತಿದ್ದು, ಸದ್ಯ ಕಾರ್ಯನಿರ್ವಹಿಸುತ್ತಿರುವ ನೋಟರಿಗಳ ಮೇಲೆ ಕೆಲಸ ಒತ್ತಡ ಹೆಚ್ಚಾಗಿರುವುರಿಂದ, ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವ ಅವಶ್ಯಕತೆ ಇದೆ ಎಂದು ವರದಿಯನ್ನು ನೀಡಿರುತ್ತಾರೆ.

ಅದರಂತೆ, ಅಪರ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರು ತಹಶೀಲ್ದಾರರ ಕಾರ್ಯಾಲಯ, ಧಾರವಾಡ ಇವರ ವರದಿಯನ್ನು ಲಗತ್ತಿಸಿ, ಮೇಲೆ ಓದಲಾದ (3)ರ ದಿನಾಂಕ: 01–10–2014ರ ಪತ್ರದಲ್ಲಿ ಸದರಿ ತಾಲ್ಲೂಕಿನ ಜನ ಸಂಖ್ಯೆ 2,18,961 ಇದ್ದು ಅನೇಕ ಶಿಕ್ಷಣ ಸಂಸ್ಥೆಗಳ ಕಾರ್ಯಸ್ಥಾನ ಮತ್ತು ಜಿಲ್ಲಾ ಕೇಂದ್ರವಾಗಿರುವುದರಿಂದ, ಹಾಲಿ ಕಾರ್ಯನಿರ್ವಹಿಸುತ್ತಿರುವ ನೋಟರಿಗಳಿಗೆ ಕೆಲಸದ ಒತ್ತಡವಿರುವುದರಿಂದ, ಧಾರವಾಡ ಕಂದಾಯ ತಾಲ್ಲೂಕಿಗೆ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವಂತೆ ಕೋರಿರುತ್ತಾರೆ.

ಮೇಲಿನ ವರದಿಗಳನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ, ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಲಾ 241 ಎಲ್‌ಸಿಎಲ್ 2014, ಬೆಂಗಳೂರು, ದಿನಾಂಕ: 11-11-2014

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಧಾರವಾಡ ಜಿಲ್ಲೆಯ ಧಾರವಾಡ ಕಂದಾಯ ತಾಲ್ಲೂಕಿಗೆ ಸಾರ್ವಜನಿಕರ ಹಿತದೃಷ್ಟಿಯಿಂದ ಒಂದು ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜೆ. ಲಕ್ಷ್ಮಣ

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),

ಕಾನೂನು ಇಲಾಖೆ (ಆಡಳಿತ-2)

P.R. 876

SC - 25

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಂ. ನಂಜಪ್ಪ, ಪಿ.ಎಸ್.ಐ., ಬೆಳಕವಾಡಿ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ ಇವರ ಮೇಲ್ಮನವಿಯ ಬಗ್ಗೆ ಅಂತಿಮ ಆದೇಶ

ಓದಲಾಗಿದೆ :

1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಮೈಸೂರು ಇವರ ಆದೇಶ ಸಂಖ್ಯೆ: ಶಿಕ್ಷೆ/57/2012, ದಿನಾಂಕ: 29-01-2013
2) ಮೇಲ್ಮನವಿ ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು ಇವರ ಆದೇಶ ಸಂಖ್ಯೆ: ಅಪೀಲು/66/2012-13, (ಓ.ಬಿ. ಸಂಖ್ಯೆ: 19/2013-14) ದಿನಾಂಕ: 29-05-2013
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 03-10-2013
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2)58/2013-14 ದಿನಾಂಕ:20-12-2013
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 262 ಸಿಎನ್‌ಎಸ್ 2013, ದಿನಾಂಕ: 18-10-2014

ಪ್ರಸ್ತಾವನೆ:

ಶ್ರೀ ಎಂ. ನಂಜಪ್ಪ, ಪಿಎಸ್‌ಐ, ಬೆಳಕವಾಡಿ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಈ ಹಿಂದೆ ಬೀಚನಹಳ್ಳಿ ಪೊಲೀಸ್ ಠಾಣೆ, ಮೈಸೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಕರ್ತವ್ಯದಲ್ಲಿ ದುರ್ನಡತೆ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:-

1. "ನೀವು ಸಿ.ಪಿ.ಐ.ರವರ ಗಮನಕ್ಕೆ ತಾರದೇ, ದಿನಾಂಕ: 21-05-2012ರ ಬೀಚನಹಳ್ಳಿ ಠಾಣಾ ದಿನಚರಿಯಲ್ಲಿ ಸಿ.ಪಿ.ಐ. ಮತ್ತು ಡಿ.ಎಸ್.ಪಿ.ರವರಿಗೆ ತಿಳಿಸಿ, ಖಾಯಿಲೆ ಮೇಲೆ ವಿಶ್ರಾಂತಿಗೆ ತೆರಳುತ್ತಿರುವುದಾಗಿ, ಸುಳ್ಳು ಮಾಹಿತಿಯನ್ನು ನಮೂದಿಸಿ ಹೋಗಿರುವುದರ ಮೂಲಕ ದುರ್ವರ್ತನೆ ಪ್ರದರ್ಶಿಸಿರುತ್ತೀರಿ,
2. ಖಾಯಿಲೆ ವಿಶ್ರಾಂತಿಯೆಂದು ದಿನಾಂಕ: 21-05-2012ರಂದು ಠಾಣಾ ದಿನಚರಿಯಲ್ಲಿ ನಮೂದಿಸಿ ಹೋದವರು ದಿನಾಂಕ: 24-08-2012ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರೂ ಸಹ, ಇದುವರೆವಿಗೂ ಖಾಯಿಲೆ ಅವಧಿ ದಿನಾಂಕ: 21-05-2012ರಿಂದ 23-08-2012ರವರೆಗಿನ ಖಾಯಿಲೆ ಅವಧಿಯ ರಜೆ ಇತ್ಯರ್ಥಪಡಿಸಿಕೊಳ್ಳಲು ರಜೆ ಅರ್ಜಿಯನ್ನು ಸಲ್ಲಿಸದೇ ಅತೀವವಾದ ಬೇಜವಾಬ್ದಾರಿ ಹಾಗೂ ನಿರ್ಲಕ್ಷ್ಯತೆ ಪ್ರದರ್ಶಿಸಿರುತ್ತೀರಿ.

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು, ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಮೈಸೂರು ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 29-01-2013ರ ಆದೇಶದಲ್ಲಿ ಇವರ ಗೈರು ಹಾಜರಿ ಅವಧಿ ದಿನಾಂಕ: 21-05-2012ರಿಂದ ದಿನಾಂಕ: 23-08-2012ರವರೆಗೆ ವೇತನ ರಹಿತ ರಜೆಯೆಂದು ಪರಿಗಣಿಸಿ ಆದೇಶಿಸಿರುತ್ತಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು ಇವರು ದಿನಾಂಕ: 29-05-2013ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಆ.ಪೊ.ಅ.ರವರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿದಾರರು ಈ ಹಿಂದೆ ಬೀಚನಹಳ್ಳಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅನಾರೋಗ್ಯದ ನಿಮಿತ್ತ ದಿನಾಂಕ: 21-05-2012ರಂದು ಹೆಚ್.ಡಿ. ಕೋಟೆಯ ಸಿ.ಪಿ.ಐ. ಹಾಗೂ ಹುಣಸೂರು ಡಿ.ವೈ.ಎಸ್.ಪಿ. ಇವರಿಗೆ ಈ ಸಂಬಂಧ ಮಾಹಿತಿ ತಿಳಿಸಿ ಠಾಣಾ ದಿನಚರಿಯಲ್ಲಿ ನಮೂದಿಸಿದ್ದು, ಠಾಣಾಧಿಕಾರಿಯವರ ದಿನಚರಿ ಪುಸ್ತಕದ ಪ್ರತಿಯನ್ನು ಪರಿಶೀಲಿಸಿದಾಗ ದಿನಾಂಕ: 21-05-2012ರಂದು ಮಧ್ಯಾಹ್ನ 12-50ಕ್ಕೆ ತಮ್ಮ ಅನಾರೋಗ್ಯದ ನಿಮಿತ್ತ ಹೋಗುವುದಾಗಿ ಈ ಸಂಬಂಧ ಸಿ.ಪಿ.ಐ. ಮತ್ತು ಡಿ.ವೈ.ಎಸ್.ಪಿ., ಇವರೊಂದಿಗೆ ಚರ್ಚಿಸಿರುವುದಾಗಿ ನಮೂದಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿದಾರರು ನೀಡಿರುವ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಪರಿಶೀಲಿಸಿದಾಗ ಸದರಿಯವರು ಅನಾರೋಗ್ಯದಿಂದ ಬಳಲುತ್ತಿದ್ದರೆಂದು ದೃಢಪಡುವ ಹಿನ್ನೆಲೆಯಲ್ಲಿ ಅರ್ಜಿದಾರರ ಪರಿಷ್ಕರಣ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಮಾರ್ಪಡಿಸುವ ಕುರಿತಂತೆ ಓದಲಾದ (4)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 146 ಪೊಸಿಅ 2013, ಬೆಂಗಳೂರು, ದಿನಾಂಕ: 19–11–2014.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ. ನಂಜಪ್ಪ, ಪಿಎಸ್ಐ, ಬೆಳಕವಾಡಿ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ ಇವರಿಗೆ ಶಿಸ್ತು ಪ್ರಾಧಿಕಾರವು ವಿಧಿಸಿರುವ ದಿನಾಂಕ: 21–05–2012ರಿಂದ ದಿನಾಂಕ: 23–08–2012ರವರೆಗೆ ವೇತನ ರಹಿತ ರಜೆಯನ್ನು ಮಾರ್ಪಡಿಸಿ, ವೈದ್ಯಕೀಯ ಕಾರಣಗಳ ಮೇಲಿನ ಪರಿವರ್ತಿತ ರಜೆಯನ್ನಾಗಿ ಎಂದು ಮಾರ್ಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜೆ.ಡಿ. ಮಧುಚಂದ್ರ ತೇಜಸ್ವಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

P.R. 877

ವಸತಿ ಸಚಿವಾಲಯ

ವಿಷಯ : ಕರ್ನಾಟಕ ಧಾರಣೀಯ ವಸತಿ ನೀತಿ–2013ರ ಪುನರ್ ರಚನೆ ಹಾಗೂ ಅನುಷ್ಠಾನ–ಉಸ್ತುವಾರಿಗಾಗಿ ಉನ್ನತ ಅಧಿಕಾರಯುಕ್ತ ಸಮಿತಿ ನೇಮಿಸುವ ಕುರಿತು

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ: ವಇ 49 ಕಗೃಮಂ 2013, ದಿನಾಂಕ: 28–10–2014

ಪ್ರಸ್ತಾವನೆ:

ಕರ್ನಾಟಕ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಮನೆಗಳ ಬೇಡಿಕೆ ಮತ್ತು ಅವುಗಳ ಲಭ್ಯತೆ ನಡುವೆ ಅಗಾಧ ಅಂತರ ಇರುವುದನ್ನು ಗಮನಿಸಿ, ಸಮಾಜದ ಕಡಿಮೆ ಆದಾಯದ ವರ್ಗದ ಜನರಿಗೂ ಸಹ ಆ ಪ್ರದೇಶಗಳಲ್ಲಿ ಕೈಗೆಟುಕುವ ದರದಲ್ಲಿ ಮನೆಗಳನ್ನು ಒದಗಿಸುವ ಉದ್ದೇಶದಿಂದ ಕರ್ನಾಟಕ ಧಾರಣೀಯ ವಸತಿ ನೀತಿ–2013ಅನ್ನು ಮೇಲೆ ಓದಲಾದ ಸರ್ಕಾರಿ ಆದೇಶದ ಮೂಲಕ ಜಾರಿಗೆ ತರಲಾಗಿದೆ.

ಧಾರಣೀಯ ವಸತಿ ನೀತಿ–2013ಅನ್ನು ಅನುಷ್ಠಾನಗೊಳಿಸಲು ಕರ್ನಾಟಕ ಗೃಹ ಮಂಡಳಿಯನ್ನು ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯಾಗಿ ನೇಮಿಸಲಾಗಿದೆ. ರಾಜ್ಯದಲ್ಲಿ ಸದರಿ ವಸತಿ ನೀತಿಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗಿದ್ದು, ನೀತಿಯನ್ನು ಅನುಷ್ಠಾನಗೊಳಿಸುವ ಹಂತಗಳಲ್ಲಿ ಎದುರಾಗುತ್ತಿರುವ ಹಲವಾರು ತೊಡಕುಗಳನ್ನು ನೋಡೆಲ್ ಏಜೆನ್ಸಿಯು ಸರ್ಕಾರದ ಗಮನಕ್ಕೆ ತಂದಿರುತ್ತದೆ. ಈ ನೀತಿಯಲ್ಲಿನ ಗುಣಲೋಪಗಳ ಕುರಿತು ಸಾಕಷ್ಟು ಸಭೆಗಳನ್ನು ನಡೆಸಿ ಕೂಲಂಕಷವಾಗಿ ಪರಿಶೀಲಿಸಲಾಗಿರುತ್ತದೆ. ಹಾಲಿ ನೀತಿಗೆ ತಿದ್ದುಪಡಿಗಳನ್ನು ತರುವ ಅಥವಾ ಪರಿಷ್ಕರಿಸುವ ಬಗ್ಗೆ ಪರಿಶೀಲಿಸುವಂತೆ ನೋಡೆಲ್ ಏಜೆನ್ಸಿಯು ಪ್ರಸ್ತಾಪಿಸಿರುತ್ತದೆ.

ಮುಂದುವರೆದು, ಈ ನೀತಿಯನ್ನು ಪುನರ್ ರಚಿಸುವ ಅಥವಾ ತಿದ್ದುಪಡಿ ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ಇಲಾಖೆ/ಸಂಸ್ಥೆಗಳೊಂದಿಗೆ ಸಮಲೋಚನೆ ನಡೆಸಲು ಹಾಗೂ ಈ ನೀತಿಯನ್ನು ಅನುಷ್ಠಾನಗೊಳಿಸಿರುವ ಇತರೆ ರಾಜ್ಯಗಳಾದ ರಾಜಸ್ಥಾನ, ಗುಜರಾತ್ ಮತ್ತು ಮಹಾರಾಷ್ಟ್ರಗಳ ಮಾದರಿಯನ್ನು ಅಭ್ಯಸಿಸಿ, ಆ ಹಿನ್ನೆಲೆಯಲ್ಲಿ ಸಂಬಂಧಿಸಿದ ಕಾಯ್ದೆ/ನಿಯಮಗಳಿಗೆ ಒಟ್ಟಾರೆ ತಿದ್ದುಪಡಿಯನ್ನು ತರುವ ಬಗ್ಗೆ ಪರಿಶೀಲಿಸಬೇಕೆಂಬ ಅಭಿಪ್ರಾಯ ಈ ಸಂಬಂಧ ನಡೆದ ಸಭೆಗಳಲ್ಲಿ ವ್ಯಕ್ತವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಹಂತದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಉನ್ನತ ಅಧಿಕಾರಯುಕ್ತ ಸಮಿತಿಯನ್ನು ನೇಮಿಸುವ ಅಗತ್ಯತೆ ಇದೆಯೆಂಬುದನ್ನು ಮನಗಂಡು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಉನ್ನತ ಅಧಿಕಾರಯುಕ್ತ ಸಮಿತಿಯನ್ನು ರಚಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 49 ಕಗೃಮಂ 2013 (ಭಾಗ–1), ಬೆಂಗಳೂರು, ದಿನಾಂಕ: 20–09–2014

ಮೇಲಿನ ಪ್ರಸ್ತಾವನೆಯ ಹಿನ್ನೆಲೆಯಲ್ಲಿ, ಕರ್ನಾಟಕ ಧಾರಣೀಯ ವಸತಿ ನೀತಿ–2013ರ ಪುನರ್ ರಚನೆ ಹಾಗೂ ಅನುಷ್ಠಾನ ಕುರಿತು ಪರಿಶೀಲಿಸುವ ಸಲುವಾಗಿ ಈ ಕೆಳಕಂಡಂತೆ ಉನ್ನತ ಅಧಿಕಾರಯುಕ್ತ ಸಮಿತಿ (High Power Committee) ಯನ್ನು ರಚಿಸಲಾಗಿದೆ.

1.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು	...	ಅಧ್ಯಕ್ಷರು
2.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ	...	ಸದಸ್ಯರು
3.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	...	ಸದಸ್ಯರು
4.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ	...	ಸದಸ್ಯರು
5.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮೂಲಸೌಕರ್ಯ ಅಭಿವೃದ್ಧಿ ಇಲಾಖೆ	...	ಸದಸ್ಯರು
6.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ	...	ಸದಸ್ಯರು
7.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ	...	ಸದಸ್ಯರು
8.	ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು	...	ಸದಸ್ಯ ಕಾರ್ಯದರ್ಶಿಗಳು

ಸದರಿ ನೀತಿಯ ಪುನರ್‌ರಚನೆ/ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರದ ಇತರೆ ಇಲಾಖೆಗಳ ಸಹಕಾರ ಅಗತ್ಯವಾದರೆ, ಆ ಇಲಾಖೆಗಳ ಸಲಹೆ/ ಸಹಕಾರವನ್ನು ಸಹ ಪಡೆದುಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಂಜೀವ್ ಕುಮಾರ್,

ಸರ್ಕಾರದ ಪ್ರಧಾನ ಕಾರ್ಯದರ್ಶಿ,

ವಸತಿ ಇಲಾಖೆ

P.R. 878

SC - 50

ಪ್ರವಾಸೋದ್ಯಮ ಸಚಿವಾಲಯ

ವಿಷಯ : ನವೀಕರಣ, ನಿರ್ವಹಣೆ ಮತ್ತು ವರ್ಗಾವಣೆ (ROMT) ಆಧಾರದಲ್ಲಿ 18 ಪ್ರವಾಸೋದ್ಯಮ ಹೋಟೆಲ್/ಆಸ್ತಿಗಳನ್ನು ಖಾಸಗಿ ವಲಯದ ಸಹಭಾಗಿತ್ವದಲ್ಲಿ ನಿರ್ವಹಿಸಲು ಮಂಜೂರಾತಿ

ಓದಲಾಗಿದೆ : ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ಇವರ ಕಡತ ಸಂಖ್ಯೆ: ಪ್ರಇ. ಯೋ–2/54/2013–14 (ಭಾಗ–1)

ಪ್ರಸ್ತಾವನೆ:

ಮೇಲೆ ಓದಲಾದ ಏಕ ಕಡತದಲ್ಲಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆಯವರು ಕರ್ನಾಟಕದಲ್ಲಿ ಪ್ರವಾಸಿಗರಿಗೆ ಕೈಗೆಟುಕುವ ವಸತಿ ಸೌಕರ್ಯಗಳನ್ನು ನೀಡುವ ಉದ್ದೇಶದಿಂದ ಯಾತ್ರಿ ನಿವಾಸಗಳನ್ನು, ಶಯನ ಗೃಹಗಳನ್ನು, ರಸ್ತೆಬದಿಯ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಒಮ್ಮೆ ನಿರ್ಮಿಸಿದ ನಂತರ ಕಾರ್ಯಾಚರಣೆಗಾಗಿ ಮತ್ತು ನಿರ್ವಹಣೆಗಾಗಿ ಅವುಗಳನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮ (KSTDC) ಹಾಗೂ ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಗೆ (ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್) (JLR) ವಹಿಸಿಕೊಟ್ಟಿರುತ್ತದೆ. ಈ ರೀತಿ ನಿಗಮ/ಸಂಸ್ಥೆಗೆ ವಹಿಸಿಕೊಟ್ಟಿರುವ ಅನೇಕ ಸೌಲಭ್ಯಗಳ ಪೈಕಿ 12 ಸೌಲಭ್ಯಗಳನ್ನು ನಿರ್ವಹಣೆ ಮಾಡಲು ಸಾಧ್ಯವಿಲ್ಲವೆಂದು ಪ್ರವಾಸೋದ್ಯಮ ಇಲಾಖೆಗೆ ಹಿಂದಿರುಗಿಸಲಾಗಿದೆ.

ಮೇಲ್ಕಂಡ 12 ಸೌಲಭ್ಯಗಳಲ್ಲದೆ, ಇಲಾಖಾ ವತಿಯಿಂದ ನಿರ್ಮಿಸಿರುವ 7 ಯಾತ್ರಿನಿವಾಸ, ಡಾರ್ಮಿಟರಿ ಸೌಲಭ್ಯಗಳನ್ನು ಯಾರಿಗೂ ನೀಡದೆ ಹಾಗೂ ಇಲ್ಲಿಯವರೆವಿಗೂ ನಿರ್ವಹಿಸದೆ ಹಾಗೆಯೇ ಉಳಿದಿರುವುದರಿಂದ, ಇದರ ಪ್ರಯೋಜನ ಪ್ರವಾಸಿಗರಿಗೆ ದೊರಕುತ್ತಿಲ್ಲವೆಂದು ತಿಳಿಸುತ್ತಾ, ಈ 19 ಸೌಲಭ್ಯಗಳನ್ನು ಖಾಸಗೀಯವರಿಂದ ನಿರ್ವಹಿಸಲು ತೀರ್ಮಾನಿಸಿ, ಪ್ರಾರಂಭಿಕವಾಗಿ ಈ ಸ್ವತ್ತುಗಳನ್ನು ಪ್ರಸ್ತುತ ಸ್ಥಿತಿಗತಿಗಳ ಪೂರ್ಣ ಚಿತ್ರಣದೊಂದಿಗೆ ವರದಿ ನೀಡಲು ಮೆ॥ ಐಡೆಕ್ ಸಂಸ್ಥೆಯನ್ನು ನೇಮಿಸಲಾಗಿತ್ತೆಂದು ವರದಿ ಮಾಡಿರುತ್ತಾರೆ.

ಮುಂದುವರೆದು ಮೆ॥ ಐಡೆಕ್ ಸಂಸ್ಥೆ 19 ಸ್ವತ್ತುಗಳ ಸ್ಥಿತಿಗತಿಗಳೊಂದಿಗೆ ವರದಿ ನೀಡಿದ್ದು, ಸದರಿ ವರದಿಯಲ್ಲಿ ಈ ಆಸ್ತಿಗಳು ಪ್ರವಾಸೋದ್ಯಮ ಆಸಕ್ತಿಯ ತಾಣಗಳಲ್ಲಿ ಮತ್ತು ಪ್ರಧಾನ ಸ್ಥಳಗಳಲ್ಲಿದ್ದರೂ ಸಹ ಶಿಥಿಲಾವಸ್ಥೆಯಲ್ಲಿದ್ದು, ಅವುಗಳನ್ನು ಕಾರ್ಯಾಚರಣೆಗೊಳಿಸಿ, ಕಾಪಾಡಿಕೊಂಡು ನವೀಕರಿಸುವ ಅಗತ್ಯತೆ ಇರುವುದಾಗಿ ಹಾಗೂ 133 ಕೊಠಡಿಗಳನ್ನು ಕ್ರಿಯಾತ್ಮಕಗೊಳಿಸಬಹುದಾಗಿದ್ದು, 200ಕ್ಕೂ ಹೆಚ್ಚು ಕೊಠಡಿಗಳ ವಿಸ್ತರಣೆಗೆ ಅವಕಾಶವಿರುವುದಾಗಿ ತಿಳಿಸಲಾಗಿದೆ. ಈ ಆಸ್ತಿಗಳ ಪ್ರಸ್ತುತ ಮೌಲ್ಯ ಸುಮಾರು ರೂ. 11.00 ಕೋಟಿಗಳೆಂದು ಮೌಲ್ಯಮಾಪನ ಮಾಡಿರುತ್ತಾರೆ ಮತ್ತು ಎಲ್ಲಾ ಅಗತ್ಯ ಸೌಲಭ್ಯಗಳು ಅಂದರೆ ಶೌಚಾಲಯಗಳು ಮತ್ತು ಪಾರ್ಕಿಂಗ್ ಇತ್ಯಾದಿಗಳನ್ನು ಒದಗಿಸುವುದರ ಜೊತೆಗೆ ಇವುಗಳ ನವೀಕರಣ ಮತ್ತು ವಿಸ್ತರಣೆಗಾಗಿ ಅಂದಾಜು ಹೂಡಿಕೆಗೆ ಸುಮಾರು ರೂ. 40.00 ಕೋಟಿ ಬೇಕಾಗುತ್ತದೆಂದು, ಅಲ್ಲದೇ ಈ 19 ಆಸ್ತಿಗಳ ವಾರ್ಷಿಕ ನಿರ್ವಹಣಾ ವೆಚ್ಚವು ರೂ. 4.00 ಕೋಟಿಗಳಾಗಬಹುದೆಂದು ತಿಳಿಸಿರುತ್ತಾರೆ.

ಮುಂದುವರೆದು, ಈ ರೀತಿ ನವೀಕರಣ, ನಿರ್ವಹಣೆ, ಮತ್ತು ವರ್ಗಾವಣೆ (ROMT) ಯೋಜನೆಯನ್ನು ಕೈಗೆತ್ತಿಕೊಂಡಲ್ಲಿ, ಕೆಳಕಂಡಂತೆ ನಿರೀಕ್ಷಿತ ಪ್ರಯೋಜನ ದೊರಕುವುದೆಂದು ವರದಿಯಲ್ಲಿ ತಿಳಿಸಿರುತ್ತಾರೆ.

1. ಈ ಆಸ್ತಿಗಳನ್ನು **'ಮಯೂರ'** ಎಂಬ ಹೆಸರಿನ ಮುದ್ರೆಯಡಿ (brand name) ಪುನಶ್ಚೇತನಗೊಳಿಸಿ ಕಾರ್ಯಾಚರಿಸಲಾಗುವುದು.
2. ಆಯವ್ಯಯ ವರ್ಗ, ಸ್ವಚ್ಛ ಮತ್ತು ಆರಾಮದಾಯಕ ವಸತಿ, ಜೊತೆಗೆ ಶೌಚಾಲಯ, ಪಾರ್ಕಿಂಗ್ ಮತ್ತು ಇತರೆ ಮೂಲ ಸೌಕರ್ಯ ಸೌಲಭ್ಯಗಳು ಪ್ರವಾಸಿಗಳಿಗೆ ದೊರೆಯಲ್ಪಡುತ್ತವೆ.
3. ಸರ್ಕಾರದ ಮೇಲೆ ಯಾವುದೇ ಆರ್ಥಿಕ ಹೊರೆಯು ಉಂಟಾಗುವುದಿಲ್ಲ.
4. ಸುಮಾರು 200 ಅಧಿಕ ಕೊಠಡಿಗಳು ಹೆಚ್ಚಾಳವಾಗಲಿವೆ.
5. 400 ಪರೋಕ್ಷ ಹುದ್ದೆಗಳ ಜತೆಯಲ್ಲಿ ಸುಮಾರು 400 ನೇರ ಉದ್ಯೋಗಗಳು ಸೃಷ್ಟಿಯಾಗುತ್ತದೆ (ಭಾರತ ಸರ್ಕಾರದ ಹುನಾರ್ ಸೆ ರೋಜ್‌ಗಾರ್ ಯೋಜನಾ ಅಡಿಯಲ್ಲಿ ಫಲಾನುಭವಿಗಳಿಗೆ ಸ್ಥಳಾವಕಾಶವನ್ನು ಒದಗಿಸುತ್ತದೆ).
6. ಇಲಾಖೆಗೆ ಸುಮಾರು ರೂ. 40.00 ಲಕ್ಷಗಳವರೆಗೆ ಆದಾಯ ಬರಲಿದ್ದು, ಈ ಹಣವನ್ನು ಇತರೆ ಪ್ರವಾಸಿ ತಾಣಗಳಲ್ಲಿನ ಶೌಚಾಲಯ ಸೌಲಭ್ಯಗಳನ್ನು ನಿರ್ವಹಿಸಲು, ಕುಡಿಯುವ ನೀರಿನ ಸೌಲಭ್ಯಗಳನ್ನು ಒದಗಿಸಲು, ಮಾಹಿತಿ ಕೇಂದ್ರಗಳನ್ನು ನಿರ್ವಹಿಸಲು, ಮತ್ತು ಪ್ರಕಟಣಾ ಫಲಕಗಳನ್ನು ಅಳವಡಿಸಲು ಬಳಸಲಾಗುವುದು.

ಮುಂದುವರೆದು, ಈ ಯೋಜನೆ ಅಡಿ ಯಾವುದೇ ಹೂಡಿಕೆಗೆ ಸರ್ಕಾರವು ನಿಧಿಯನ್ನು ಒದಗಿಸುವ ಅವಶ್ಯಕತೆ ಇರುವುದಿಲ್ಲವೆಂದು, ಬದಲಿಗೆ, 30 ವರ್ಷಗಳ ಅವಧಿಗೆ ಸದರಿ ಆಸ್ತಿಗಳನ್ನು ನೀಡುವುದರಿಂದ ಸುಮಾರು ರೂ. 40 ಲಕ್ಷಗಳವರೆಗೆ ಆದಾಯವು ಇಲಾಖೆಗೆ ಬರುತ್ತದೆ ಎಂದು ಅಂದಾಜಿಸಿ ಯೋಜನಾ ವೆಚ್ಚ, ಕಾರ್ಯನಿರ್ವಹಣೆ ಮತ್ತು ನಿರ್ವಹಣಾ ವೆಚ್ಚಗಳು ಇತ್ಯಾದಿ ವಿವರದ ಜೊತೆಗೆ ಈ ಆಸ್ತಿಗಳ ಪ್ರಸ್ತುತ ಸ್ಥಿತಿಗತಿಗಳ ಒಂದು ಯೋಜನಾ ರಚನಾ ವರದಿ ಹಾಗೂ ಕಾರ್ಯಾಚರಣೆಯ 1ನೇ ವರ್ಷದಲ್ಲಿನ ಅಂದಾಜು ಆದಾಯ, ಭೇಟಿಗಳು, ಪ್ರಸ್ತುತ ಸ್ಥಿತಿ ಇತ್ಯಾದಿ ವಿವರಗಳನ್ನು ಸಲ್ಲಿಸಿರುತ್ತಾರೆಂದು ಪ್ರವಾಸೋದ್ಯಮ ನಿರ್ದೇಶಕರು ತಿಳಿಸುತ್ತಾ, ಈ ಸ್ವತ್ತುಗಳನ್ನು ನವೀಕರಣ, ನಿರ್ವಹಣೆ ಮತ್ತು ವರ್ಗಾವಣೆ (ROMT) ಆಧಾರದಲ್ಲಿ ಖಾಸಗಿ ವಲಯದ ಸಹಭಾಗಿತ್ವದಲ್ಲಿ ನಿರ್ವಹಿಸಲು ಸರ್ಕಾರದ ಆದೇಶವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಪ್ರಇ 175 ಪ್ರವಾಯೋ 2014, ಬೆಂಗಳೂರು, ದಿನಾಂಕ: 19–11–2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರವಾಸೋದ್ಯಮ ಇಲಾಖೆ ವತಿಯಿಂದ ನಿರ್ಮಿಸಿರುವ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ–1ರಲ್ಲಿನ 18 ಹೋಟೆಲ್ /ಆಸ್ತಿ/ಸೌಲಭ್ಯಗಳನ್ನು ಕೆಳಕಂಡ ಷರತ್ತುಗಳಿಗನುಗುಣವಾಗಿ 30 ವರ್ಷಗಳ ಅವಧಿಗೆ ಅನುಬಂಧ–2ರಲ್ಲಿ ವಿವರಿಸಿದಂತೆ ನವೀಕರಣ, ನಿರ್ವಹಣೆ ಮತ್ತು ವರ್ಗಾವಣೆ (ROMT) ಆಧಾರದಲ್ಲಿ ಖಾಸಗಿ ವಲಯದ ಸಹಭಾಗಿತ್ವದ ಮೂಲಕ ನಿರ್ವಹಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

1. **ನವೀಕರಣ, ನಿರ್ವಹಣೆ ಮತ್ತು ವರ್ಗಾವಣೆ (ROMT) ಆಧಾರದಲ್ಲಿ 18 ಪ್ರವಾಸೋದ್ಯಮ ಆಸ್ತಿಗಳನ್ನು 30 ವರ್ಷಗಳಿಗೆ ಖಾಸಗಿ ವಲಯದ ಸಹಭಾಗಿತ್ವದ ಮೂಲಕ ನಿರ್ವಹಿಸುವುದು.**
2. **ಈ ರೀತಿ (ROMT) ಆಧಾರದ ಮೇಲೆ ಪಾಲುದಾರರ ಆಯ್ಕೆಯನ್ನು ಪಾರದರ್ಶಕ ನಿಯಮಗಳನ್ನು ಪಾಲಿಸಿ ಆಯ್ಕೆ ಮಾಡುವುದು.**
3. **ಆಸ್ತಿಗಳನ್ನು ಪುನಶ್ಚೇತನಗೊಳಿಸಿ 'ಮಯೂರ' ಎಂಬ ಹೆಸರಿನ ಮುದ್ರೆಯಡಿ (brand) ಕಾರ್ಯಾಚರಣೆ ಮಾಡುವುದು.**
4. **Pre-qualification ಹಾಗೂ E-auction ಪದ್ಧತಿಗಳನ್ನು ಅನುಸರಿಸುವ ಮುಖಾಂತರ ಸದರಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡುವುದು.**
5. **ಸದರಿ ಸ್ವತ್ತುಗಳನ್ನು ಯಾವುದೇ ಕಾರಣಕ್ಕೂ ಗುತ್ತಿಗೆ ಅಡವಿಡುವುದಾಗಲೀ/ಪರಭಾರೆ ಮಾಡುವುದಾಗಲೀ ಮಾಡಬಾರದು.**
6. **ಸದರಿ ಸ್ವತ್ತುಗಳನ್ನು ಗುತ್ತಿಗೆದಾರರು ಉಪಗುತ್ತಿಗೆ ನೀಡಬಾರದು.**
7. **ಈ ರೀತಿಯಲ್ಲಿ ಬರುವ ಆದಾಯವನ್ನು ಇತರೆ ಪ್ರವಾಸಿ ತಾಣಗಳಲ್ಲಿನ ಶೌಚಾಲಯ ಸೌಲಭ್ಯಗಳನ್ನು ನಿರ್ವಹಿಸಲು, ಕುಡಿಯುವ ನೀರಿನ ಸೌಲಭ್ಯಗಳನ್ನು ಒದಗಿಸಲು, ಮಾಹಿತಿ ಕೇಂದ್ರಗಳನ್ನು ನಿರ್ವಹಿಸಲು ಮತ್ತು ಪ್ರಕಟಣಾ ಫಲಕಗಳನ್ನು ಅಳವಡಿಸಲು ಬಳಸುವುದು ಮತ್ತು ಅಂತಹ ಆದಾಯವನ್ನು ಪ್ರವಾಸೋದ್ಯಮ ನಿರ್ದೇಶಕರ ಪಿ.ಡಿ. ಖಾತೆಯಲ್ಲಿ ಠೇವಣಿ ಇಡುವುದು.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ. ರವಿಮೂರ್ತಿ,

ಸರ್ಕಾರದ ಜಂಟಿ ಕಾರ್ಯದರ್ಶಿ,

ಪ್ರವಾಸೋದ್ಯಮ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ: ಪ್ರಇ 175 ಪ್ರವಾಯೋ 2014, ಬೆಂಗಳೂರು, ದಿನಾಂಕ: 19–11–2014ಕ್ಕೆ ಅನುಬಂಧ–1

ಕ್ರಮ ಸಂಖ್ಯೆ	ಹೋಟೆಲ್/ಆಸ್ತಿ/ಸೌಲಭ್ಯಗಳ ಹೆಸರು	ತಾಲ್ಲೂಕು	ಜಿಲ್ಲೆ
1.	ಹೋಟೆಲ್ ಮಯೂರ ಮಲಪ್ರಭ, ಅಶೋಕನಗರ	ಬೆಳಗಾವಿ	ಬೆಳಗಾವಿ
2.	ಹೋಟೆಲ್ ಮಯೂರ ಪುಷ್ಪಗಿರಿ, ಹಳೇಬೀಡು	ಬೇಲೂರು	ಹಾಸನ
3.	ಯಾತ್ರಿನಿವಾಸ, ಶಾಂತಿಸಾಗರ	ಚನ್ನಗಿರಿ	ದಾವಣಗೆರೆ
4.	ಯಾತ್ರಿನಿವಾಸ, ಶಿಕಾರಿಪುರ	ಶಿಕಾರಿಪುರ	ಶಿವಮೊಗ್ಗ
5.	ಯಾತ್ರಿನಿವಾಸ, ದೇವರಾಯನದುರ್ಗ	ತುಮಕೂರು	ತುಮಕೂರು
6.	ರಸ್ತೆಬದಿ ಸೌಲಭ್ಯ, ಗಾಣಿಗಾಪುರ	ಅಫ್ಜಲ್‌ಪುರ	ಗುಲ್ಬರ್ಗಾ
7.	ಡಾರ್ಮಿಟರಿ, ಮೇಲುಕೋಟೆ	ಪಾಂಡವಪುರ	ಮಂಡ್ಯ
8.	ಯಾತ್ರಿನಿವಾಸ, ಐಹೊಳೆ	ಹುನಗುಂದ್	ಬಾಗಲಕೋಟೆ
9.	ರಸ್ತೆಬದಿ ಸೌಲಭ್ಯ, ಲಕ್ಕುಂಡಿ	ಗದಗ	ಗದಗ
10.	ಹೋಟೆಲ್ ಮಯೂರ ಸಮುದ್ರ, ಗೋಕರ್ಣ	ಕುಮಟ	ಉತ್ತರ ಕನ್ನಡ
11.	ಡಾರ್ಮಿಟರಿ, ಮೂಡುಬಿದರೆ	ಮಂಗಳೂರು	ದಕ್ಷಿಣ ಕನ್ನಡ
12.	ಹೋಟೆಲ್ ಮಯೂರ ಭರಚುಕ್ಕಿ, ಶಿವನಸಮುದ್ರ	ಕೊಳ್ಳೇಗಾಲ	ಚಾಮರಾಜನಗರ
13.	ಹೋಟೆಲ್ ಮಯೂರ ಕೇಶವ, ಸೋಮನಾಥಪುರ	ಟಿ. ನರಸೀಪುರ	ಮೈಸೂರು

ಕ್ರಮ ಸಂಖ್ಯೆ	ಹೋಟೆಲ್/ಆಸ್ತಿ/ಸೌಲಭ್ಯಗಳ ಹೆಸರು	ತಾಲ್ಲೂಕು	ಜಿಲ್ಲೆ
14.	ರಸ್ತೆಬದಿ ಸೌಲಭ್ಯ, ತಣ್ಣಿಕೊಳ	ಸವದತ್ತಿ	ಬೆಳಗಾವಿ
15.	ಹೋಟೆಲ್ ಮಯೂರ, ದೇವರಾಯನದುರ್ಗ	ತುಮಕೂರು	ತುಮಕೂರು
16.	ರಸ್ತೆಬದಿ ಸೌಲಭ್ಯ, ತೆಲಗಿ	ಬಸವನ ಬಾಗೇವಾಡಿ	ಬಿಜಾಪುರ
17.	ರಸ್ತೆಬದಿ ಸೌಲಭ್ಯ, ಶಿರಾಡಿ	ಸಕಲೇಶಪುರ	ಹಾಸನ
18.	ಫಾಸ್ಟ್‌ಫುಡ್ ಕೌಂಟರ್, ಅನ್ಮೋಡ್	ಜೊಯಿಡಾ	ಉತ್ತರ ಕನ್ನಡ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ. ರವಿಮೂರ್ತಿ,

ಸರ್ಕಾರದ ಜಂಟಿ ಕಾರ್ಯದರ್ಶಿ,

ಪ್ರವಾಸೋದ್ಯಮ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ: ಪ್ರಇ 175 ಪ್ರವಾಯೋ 2014, ಬೆಂಗಳೂರು, ದಿನಾಂಕ: 19–11–2014ಕ್ಕೆ ಅನುಬಂಧ–2

Proposed implementation Structure

The Project be developed through private sector participation on ROMT framework as which entails the following factors:

I. The tourism property would be handed over to a private partner having efficient managerial skills and adequate manpower to management the same for a period of 30 years. At the end of Agreement Period, there shall be an option of extending the Agreement Period for a further period of 30 years on mutually agreed terms and conditions. After the expiry of the Agreement period the tourism property would be handed back to Director of Tourism.

ii. The selected private partner shall be required to mobilize finances, design, construct and operate and maintain the said properties as per the norms set out by Director of Tourism and other applicable laws.

iii. All these properties should fall under the category of "Mayura", which is the trademark of KSTDC and the private partner would be required to promote the same trademark mandatorily in these properties.

iv. The tourism property should not be sold or leased out to any other private partner.

v. Annual payments is payable to Director of Tourism by the private partner throughout the agreement period.

vi. The selected private partner is required to renovate and refurbish the existing facilities.

vii. The selected private partner is also been given the option to undertake construction of additional facilities in each of the tourism properties after obtaining the approval of Director of Tourism which would include the following:

   a. Construction of Additional Rooms/Dormitories

   b. Construction of Restaurant/Food court/Cafeteria

   c. Shops/retail space for the benefits of tourists

   d. First-aid centre/clinics

   e. ATM

   f. Water based activities (only applicable to Shanthisagara lake property) Other activities consistent with tourism for the benefit of tourists, with prior approval of Director of Tourism.

viii. The selected private partner is required to construct/renovate the properties as per the construction standards provided in the relevant and applicable laws.

ix. Operate and maintain the properties as per Good industry Standards.

x. The construction of additional facilities will be eligible for incentives under Expansion Projects category as per the Karnataka Tourism Policy 2014-19.

H.K. RAVIMURTHY,

Joint Secretary to Government,

Tourism Department.

PR 879

SC 100

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಸ್.ವೈ. ಮೋಹನ್, ಪಿಎಸ್ಐ, ಅಬಕಾರಿ ಮತ್ತು ಲಾಟರಿ ನಿಷೇಧ ದಳ, ಕೋಲಾರ ಜಿಲ್ಲೆ, ಇವರ ಪರಿಷ್ಕರಣ ಮೇಲ್ಮನವಿಯ ಬಗ್ಗೆ ಅಂತಿಮ ಆದೇಶ.

ಓದಲಾಗಿದೆ :
1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಚಿಕ್ಕಬಳ್ಳಾಪುರ ಜಿಲ್ಲೆ, ಇವರ ಜ್ಞಾಪನ ಸಂಖ್ಯೆ: ಪನ್ಸಿ/ಮಿಶ್ರ/44/2011-12, ದಿನಾಂಕ: 18-11-2011
2) ಮೇಲ್ಮನವಿ ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ: ಅಪೀಲು/10/ಶಿಕ್ಷೆ/2012 (ಓ.ಬಿ.ಸಂಖ್ಯೆ: 0114/2012-13), ದಿನಾಂಕ: 08-11-2012
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 18-09-2013
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)53/2013-14 ದಿನಾಂಕ: 09-01-2014
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 263 ಸಿಎನ್‌ಎಸ್ 2013, ದಿನಾಂಕ: 18-10-2014

ಪ್ರಸ್ತಾವನೆ:

ಶ್ರೀ ಎಸ್.ವೈ. ಮೋಹನ್, ಪಿಎಸ್‌ಐ, ಅಬಕಾರಿ ಮತ್ತು ಲಾಟರಿ ನಿಷೇಧ ದಳ, ಕೋಲಾರ ಜಿಲ್ಲೆ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಈ ಹಿಂದೆ ಕೋಲಾರ ನಗರ ಪೊಲೀಸ್ ಠಾಣೆ, ಕೋಲಾರ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿಯನ್ನು ಪ್ರದರ್ಶಿಸಿದ ಕಾರಣಗಳ ಮೇಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 106(ಎ)ರನ್ವಯ ಕೆಳಕಂಡಂತೆ ಕರ್ತವ್ಯ ಪರಿತ್ಯಾಗ ಸೂಚನಾ ಪತ್ರವನ್ನು ಹೊರಡಿಸಿರುತ್ತಾರೆ.

> "ನೀವು ಒಬ್ಬ ಜವಾಬ್ದಾರಿಯುತ ಅಧಿಕಾರಿಯಾಗಿದ್ದು, ದಿನಾಂಕ: 02-08-2011ರಿಂದ ಮೇಲಾಧಿಕಾರಿಗಳ ಅನುಮತಿಯನ್ನು ಪಡೆಯದೆ ರಜೆಯನ್ನು ಮಂಜೂರು ಮಾಡಿಸಿಕೊಳ್ಳದೆ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿ ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿಯನ್ನು ತೋರ್ಪಡಿಸಿರುತ್ತೀರಿ. ಕರ್ನಾಟಕ ಪೊಲೀಸ್ ಮ್ಯಾನ್ಯುಯಲ್ ವಾಲ್ಯೂಂ 1ರ ನಿಯಮ 525ರ ಪ್ರಕಾರ ಗೈರುಹಾಜರಿ ಅವಧಿಯು 21 ದಿನಗಳಿಗೂ ಮೇಲ್ಪಟ್ಟಿದ್ದು, ಇದುವರೆವಿಗೂ ಗೈರುಹಾಜರಾಗಿರುವುದರಿಂದ ನಿಮ್ಮನ್ನು ಹಂಗಾಮಿಯಾಗಿ ಕರ್ತವ್ಯವನ್ನು ತ್ಯಜಿಸಿದಿರೆಂದು ಪರಿಗಣಿಸಲಾಗಿದೆ."

ಮೇಲ್ಕಂಡ ಕರ್ತವ್ಯ ಪರಿತ್ಯಾಗ ಸೂಚನಾ ಪತ್ರಕ್ಕೆ ಆ.ಪೊ.ಅ.ರವರು ನೀಡಿರುವ ಸಮಜಾಯಿಷಿಯನ್ನು ಒಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 18-11-2011ರ ಜ್ಞಾಪನದಲ್ಲಿ ಸದರಿಯವರು ದಿನಾಂಕ: 08-08-2011ರಿಂದ ದಿನಾಂಕ: 31-10-2011ರವರೆಗೆ 85 ದಿನಗಳ ಕಾಲ ಕರ್ತವ್ಯಕ್ಕೆ ಗೈರು ಹಾಜರಾದ ಅವಧಿಯನ್ನು ಕೆ.ಸಿ.ಎಸ್. ನಿಯಮ 106(ಎ) ಪ್ರಕಾರ "ಸಂಬಳ ರಹಿತ ರಜೆ" ಎಂದು ಪರಿಗಣಿಸಿ ಆದೇಶಿಸಿರುತ್ತಾರೆ.

ಶಿಸ್ತು ಪ್ರಾಧಿಕಾರದ ಆದೇಶದ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 08-11-2012ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶದ ವಿರುದ್ಧ ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರು ದಿನಾಂಕ: 02-08-2011ರಿಂದ 08-08-2011ರವರೆಗೆ ಚಿಂತಾಮಣಿಯಲ್ಲಿ ಬಂದೋಬಸ್ತ್ ಕರ್ತವ್ಯ ನಿರ್ವಹಿಸಿ, ಅನಾರೋಗ್ಯದ ನಿಮಿತ್ತ ಮತ್ತು ಚಿಕಿತ್ಸೆ ಪಡೆಯಲು ಪೊಲೀಸ್ ಅಧೀಕ್ಷಕರು, ಡಿ.ಐ.ಎಸ್.ಪಿ. ಮತ್ತು ಸಿ.ಪಿ.ಐ. ಇವರುಗಳ ಪೂರ್ವಾನುಮತಿ ಪಡೆದು ಚಿಕಿತ್ಸೆಗೆ ತೆರಳಿದ್ದು, ನಂತರ ಆಸ್ಪತ್ರೆಯಲ್ಲಿ ಆರೋಗ್ಯ ಭಾಗ್ಯ ಯೋಜನೆಯಡಿ ಚಿಕಿತ್ಸೆಗಾಗಿ ಪೊಲೀಸ್ ಅಧೀಕ್ಷಕರವರಿಂದ ಧೃಢೀಕರಣ ಪತ್ರವನ್ನು ಪಡೆದಿರುವುದು ಅವರು ಸಲ್ಲಿಸಿರುವ ದಾಖಲೆಗಳಿಂದ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಶಿಸ್ತು ಪ್ರಾಧಿಕಾರ ವಿಧಿಸಿರುವ ಶಿಕ್ಷೆಯನ್ನು ಮಾರ್ಪಡಿಸುವ ಕುರಿತಂತೆ ಓದಲಾದ ಕ್ರಮಸಂಖ್ಯೆ: (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 32 ಪೊಸಿಅ 2014, ಬೆಂಗಳೂರು, ದಿನಾಂಕ: 13-11-2014.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ವೈ. ಮೋಹನ್, ಪಿಎಸ್‌ಐ, ಅಬಕಾರಿ ಮತ್ತು ಲಾಟರಿ ನಿಷೇಧ ದಳ, ಕೋಲಾರ ಜಿಲ್ಲೆ, ಇವರ ಪರಿಷ್ಕರಣ ಮೇಲ್ಮನವಿಯನ್ನು ಪುರಸ್ಕರಿಸಿ, ಶಿಸ್ತು ಪ್ರಾಧಿಕಾರವು ಇವರಿಗೆ ವಿಧಿಸಿರುವ ದಿನಾಂಕ: 08-08-2011ರಿಂದ 31-10-2011ರವರೆಗಿನ 85 ದಿನಗಳ "ಸಂಬಳ ರಹಿತ" ರಜೆಯ ದಂಡನೆ ಆದೇಶವನ್ನು ಪರಿಷ್ಕರಿಸಿ, ವೈದ್ಯಕೀಯ ಕಾರಣಗಳ ಮೇಲೆ ಅವರ ಹಕ್ಕಿನಲ್ಲಿರುವ ರಜೆ ಎಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜೆ.ಡಿ. ಮಧುಚಂದ್ರ ತೇಜಸ್ವಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

P.R. 881

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಜಿ. ಪದ್ಮನಾಭಯ್ಯ, ಎಹೆಚ್‌ಸಿ-38, ಡಿಎಆರ್, ಕೆಜಿಎಫ್, ಇವರ ಪರಿಷ್ಕರಣ ಮೇಲ್ಮನವಿಯ ಬಗ್ಗೆ ಅಂತಿಮ ಆದೇಶ.

ಓದಲಾಗಿದೆ :

1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಕೋಲಾರ ಚಿನ್ನದಗಣಿ ಪ್ರದೇಶ, ಇವರ ಆದೇಶ ಸಂಖ್ಯೆ: ಸಿಬ್ಬಂದಿ(2)/ಡಿಇ/03/2012 (ಓ.ಬಿ. ಸಂಖ್ಯೆ: 142/2013) ದಿನಾಂಕ: 18–06–2013
2) ಮೇಲ್ಮನವಿ ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ: ಅಪೀಲು/50/ಶಿಕ್ಷೆ/2013 (ಓ.ಬಿ.ಸಂಖ್ಯೆ: 210/2013–14), ದಿನಾಂಕ: 25–03–2014
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 09–05–2014
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)20/2014–15, ದಿನಾಂಕ: 03–09–2014

ಪ್ರಸ್ತಾವನೆ:

ಶ್ರೀ ಜಿ. ಪದ್ಮನಾಭಯ್ಯ, ಎಹೆಚ್‌ಸಿ–38, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ ಇವರು) ಡಿಎಆರ್, ಕೆಜಿಎಫ್ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ಅಧಿಕಾರ ವ್ಯಾಪ್ತಿ ಮೀರಿದ ಹವ್ಯಾಸಗಳನ್ನು ರೂಢಿಸಿಕೊಂಡು ಕರ್ತವ್ಯದಲ್ಲಿ ದುರ್ನಡತೆ ಪ್ರದರ್ಶಿಸಿದ ಕಾರಣಗಳ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965/89ರ ನಿಯಮ 6ರಡಿ ಈ ಕೆಳಕಂಡಂತೆ ದೋಷರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

"ಶ್ರೀ ಜಿ. ಪದ್ಮನಾಭಯ್ಯ, ಎಹೆಚ್‌ಸಿ–38, ಡಿ.ಎ.ಆರ್., ಕೆ.ಜಿ.ಎಫ್., ಆದ ನೀವು ದಿನಾಂಕ: 25–09–2008ರಿಂದ ಬೆಂಗಳೂರು ನಗರ ಲೋಕಾಯುಕ್ತ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ: 08/2009ರಲ್ಲಿ ಆರೋಪಿ 1 – ಶ್ರೀ ವೈ. ಸಂಪಂಗಿ, ಶಾಸಕರು, ಇವರಿಗೆ ಭದ್ರತಾ ಪೊಲೀಸ್ ಸಿಬ್ಬಂದಿಯಾಗಿಯೇ ಕರ್ತವ್ಯದಲ್ಲಿ ಮುಂದುವರೆದಿದ್ದು, ದಿನಾಂಕ: 29–01–2009ರಂದು ಲೋಕಾಯುಕ್ತ ಪೊಲೀಸರು ಶ್ರೀ ವೈ. ಸಂಪಂಗಿ ಇವರನ್ನು ದಾಳಿ ಮಾಡಿದಾಗ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ನಿಮಗೆ ಗುರುತನ್ನು ತೋರಿಸಲಿಲ್ಲವೆಂತಲೂ, ಅವರು ಸಮವಸ್ತ್ರದಲ್ಲಿರಲಿಲ್ಲವೆಂತಲೂ, ಆರೋಪಿತರ ಕೊಠಡಿಯೊಳಗೆ ಪ್ರವೇಶಿಸುವ ಮೊದಲು ಆರೋಪಿ/ಶಾಸಕರ ಅನುಮತಿಯನ್ನು ಪಡೆದುಕೊಳ್ಳಲು ನಿಮಗೆ ಅವಕಾಶ ಕೊಡಲಿಲ್ಲವೆಂತಲೂ, ಆರೋಪಿತರನ್ನು ಲೋಕಾಯುಕ್ತ ಅಧಿಕಾರಿಗಳು ಕರೆದೊಯ್ಯುವಾಗ ನಿಮಗೆ ಮಾಹಿತಿ ಕೊಡಲಿಲ್ಲವೆಂತ ನೀವು ಲೋಕಾಯುಕ್ತ ಅಧಿಕಾರಿಗಳ ವಿರುದ್ಧ ಆಪಾದನೆಗಳನ್ನು ಮಾಡಿರುವುದೂ ಅಲ್ಲದೆ ಆರೋಪಿ/ಶಾಸಕರನ್ನು ಭೇಟಿ ಮಾಡಲು ಬರುವ ಸಂದರ್ಶಕರ ನಡುವೆ ನಡೆಯುವ ಸಂಭಾಷಣೆಯನ್ನು ಆಲಿಸುವುದು ಮತ್ತು ವೀಕ್ಷಿಸುವುದು ತನ್ನ ಹವ್ಯಾಸವಾಗಿರುತ್ತದೆಂದು ದಿನಾಂಕ: 02–01–2012ರಂದು ಘನ ಲೋಕಾಯುಕ್ತ ನ್ಯಾಯಾಲಯದಲ್ಲಿ ಸಾಕ್ಷ್ಯ ನೀಡಿದಾಗ ನುಡಿದಿದ್ದು, ಇದರಿಂದ ನೀವು ನಿಮ್ಮ ಅಧಿಕಾರ ವ್ಯಾಪ್ತಿಗೆ ಮೀರಿದ ಹವ್ಯಾಸಗಳನ್ನು ರೂಢಿಸಿಕೊಂಡು ನಿಮ್ಮ ಕರ್ತವ್ಯದಲ್ಲಿ ದುರ್ನಡತೆ ತೋರ್ಪಡಿಸಿ ಲೋಪವೆಸಗಿರುತ್ತೀರಿ."

ಇಲಾಖಾ ವಿಚಾರಣೆಯಲ್ಲಿ ಆ.ಪೊ.ಅ.ರವರ ಮೇಲಿನ ಆಪಾದನೆಗಳು ಸಾಬೀತಾಗಿದೆಯೆಂದು ವಿಚಾರಣಾಧಿಕಾರಿಗಳು ಅಭಿಪ್ರಾಯ ನೀಡಿದ್ದು, ಅದರಂತೆ ಆ.ಪೊ.ಅ.ರವರಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ, ಆ.ಪೊ.ಅ.ರವರು ನೀಡಿದ ಸಮಜಾಯಿಷಿಯನ್ನು ಒಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಕೋಲಾರ ಚಿನ್ನದ ಗಣಿ ಪ್ರದೇಶ, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 18–06–2013ರ ಆದೇಶದಲ್ಲಿ ಅರ್ಜಿದಾರರ ವೇತನವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ಹುದ್ದೆಯ ಕನಿಷ್ಠ ವೇತನ ರೂ. 12,500/–ಗಳಿಗೆ ಮೂರು ವರ್ಷಗಳ ಕಾಲ ಮುಂದಿನ ವೇತನ ಬಡ್ತಿಗಳಿಗೆ ಧಕ್ಕೆಯಾಗುವಂತೆ ಇಳಿಸಿ, ಸದರಿಯವರು ಮೂರು ವರ್ಷಗಳ ತರುವಾಯ ಹೊಸದಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಸಂಪಾದಿಸಿಕೊಳ್ಳಲು ಅರ್ಹರಾಗಿರುತ್ತಾರೆಂದು ಹಾಗೂ ಸದರಿಯವರು ಅಮಾನತ್ತಿನಲ್ಲಿ ಕಳೆದ ಅವಧಿ ದಿನಾಂಕ: 08–07–2012ರಿಂದ ದಿನಾಂಕ: 13–08–2012ರವರೆಗಿನ 37 ದಿನಗಳನ್ನು ಅಮಾನತ್ತೆಂದು ಪರಿಗಣಿಸಿ ಆದೇಶಿಸಿರುತ್ತಾರೆ.

ಶಿಸ್ತು ಪ್ರಾಧಿಕಾರದ ಆದೇಶದ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ಪರಿಶೀಲಿದ ಮೇಲ್ಮನವಿ ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 25–03–2014ರ ಆದೇಶದಲ್ಲಿ ಅರ್ಜಿದಾರರ ಮೇಲ್ಮನವಿಯನ್ನು ಪುರಸ್ಕರಿಸಿ, ಅರ್ಜಿದಾರರ ವೇತನವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ಹುದ್ದೆಯ ಕನಿಷ್ಠ ವೇತನ ರೂ. 12,500/–ಗಳಿಗೆ ಮೂರು ವರ್ಷಗಳ ಕಾಲ ಮುಂದಿನ ವೇತನ ಬಡ್ತಿಗಳಿಗೆ ಧಕ್ಕೆಯಾಗುವಂತೆ ಇಳಿಸಿರುವ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಮಾರ್ಪಡಿಸಿ, ಮುಂದಿನ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಭಾಗಶಃ ಮಾರ್ಪಡಿಸಿ, ಉಳಿದ ದಂಡನೆಗಳು ಯಥಾವತ್ತಾಗಿರುತ್ತವೆ ಎಂದು ಆದೇಶಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣಾ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರ ಮೇಲೆ ಹೊರಿಸಿದ ಆರೋಪಗಳು ಗುರುತರವಾಗಿದ್ದು, ಈಗಾಗಲೇ ಮೇಲ್ಮನವಿ ಪ್ರಾಧಿಕಾರವು ಶಿಸ್ತು ಪ್ರಾಧಿಕಾರದ ಆದೇಶವನ್ನು ಮಾರ್ಪಡಿಸಿದ್ದು, ಹಾಗೂ ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸಬಹುದಾದ ಹೆಚ್ಚಿನ ಸಂಗತಿಗಳು ಇಲ್ಲದಿರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 77 ಪೊಸಿಅ 2014, ಬೆಂಗಳೂರು, ದಿನಾಂಕ: 21–11–2014.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಜಿ. ಪದ್ಮನಾಭಯ್ಯ, ಎಹೆಚ್‌ಸಿ–38, ಡಿಎಆರ್, ಕೆಜಿಎಫ್ ಇವರು ಸರ್ಕಾರಕ್ಕೆ ಸಲ್ಲಿಸಿದ ಪರಿಷ್ಕರಣ ಮೇಲ್ಮನವಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜೆ.ಡಿ. ಮಧುಚಂದ್ರ ತೇಜಸ್ವಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

P.R. 882

ಪ್ರವಾಸೋದ್ಯಮ ಸಚಿವಾಲಯ

ವಿಷಯ: ಕಾರ್ಪೊರೇಟ್ ಸಾಮಾಜಿಕ ಸಹಭಾಗಿತ್ವದಡಿಯಲ್ಲಿ **"ಪ್ರವಾಸಿ ತಾಣಗಳು/ಸರ್ಕ್ಯೂಟ್ಸ್ ದತ್ತು ತೆಗೆದುಕೊಳ್ಳುವ ಕಾರ್ಯಕ್ರಮ"** ವನ್ನು ಪ್ರಾರಂಭಿಸಲು ಮಂಜೂರಾತಿ.

ಓದಲಾಗಿದೆ: ಪ್ರವಾಸೋದ್ಯಮ ನಿರ್ದೇಶಕರ ಕಡತ ಸಂಖ್ಯೆ: ಪ್ರಇ/ಯೋ–2/226/2013–14.

ಪ್ರಸ್ತಾವನೆ :

2014–15ನೇ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕಾರ್ಪೊರೇಟ್ ಸಾಮಾಜಿಕ ಸಹಭಾಗಿತ್ವದಡಿಯಲ್ಲಿ ಪ್ರವಾಸಿ ತಾಣ/ಸರ್ಕ್ಯೂಟ್ಸ್‌ಗಳ ದತ್ತು ತೆಗೆದುಕೊಳ್ಳುವ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುವುದೆಂದು ಘೋಷಿಸಿರುತ್ತಾರೆ.

2. ಭಾರತ ಸರ್ಕಾರವು **"ಭಾರತ ಸ್ವಚ್ಛತಾ ಅಭಿಯಾನ"** ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಲ್ಲದೇ **"ಅತಿಥಿ ದೇವೋಭವ"** ಎಂಬ ಹೆಸರಿನಲ್ಲಿ ಸಾಮಾಜಿಕ ಜಾಗ್ರತೆ ಮತ್ತು ಮಾಧ್ಯಮ ಆಂದೋಲನ ಕೈಗೊಳ್ಳಲಾಗಿದೆ. ಮಧ್ಯಸ್ಥಗಾರರ ಜೊತೆಗೆ ಭಾರತ ಸರ್ಕಾರವು ಸರಣಿ ಸಭೆ ನಡೆಸಿದ ನಂತರ ಈ ಆಂದೋಲನಕ್ಕೆ ಖಾಸಗಿ ಮತ್ತು ಸಾರ್ವಜನಿಕ ಸಂಘ ಸಂಸ್ಥೆಗಳನ್ನು ಒಳಗೊಂಡು ನಿರ್ವಹಿಸುತ್ತಿದೆ. ಅದರನ್ವಯ ಭಾರತ ಸ್ವಚ್ಛತಾ ಅಭಿಯಾನ ಯೋಜನೆಯಡಿ ಪ್ರಾಯೋಗಿಕವಾಗಿ ನವದೆಹಲಿಯ ಕುತುಬ್ ಮಿನಾರ್ ಪ್ರದೇಶವನ್ನು ಭಾರತ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ದತ್ತು ಪಡೆದಿರುತ್ತದೆ. ಅದೇ ರೀತಿ ಪ್ರಮುಖ ಸ್ಮಾರಕಗಳು ಅಂದರೆ ಆಗ್ರಾದಲ್ಲಿರುವ ತಾಜ್‌ಮಹಲ್, ಮಹಾರಾಷ್ಟ್ರದ ಎಲ್ಲೋರಾ ಗುಹೆಗಳು, ಆನೆಗುಹೆಗಳು, ದೆಹಲಿಯ ಕೆಂಪುಕೋಟೆ, ಹೈದರಾಬಾದಿನ ಮಹಾಬಲಿಪುರಂನಲ್ಲಿರುವ ಗೋಲ್‌ಕೊಂಡಾ ಕೋಟೆ ಇತ್ಯಾದಿಗಳನ್ನು ದತ್ತು ತೆಗೆದುಕೊಳ್ಳಲು ಓ.ಎನ್.ಜಿ.ಸಿ ಇಚ್ಛೆ ವ್ಯಕ್ತಪಡಿಸಿರುವುದಾಗಿ ಪ್ರವಾಸೋದ್ಯಮ ನಿರ್ದೇಶಕರು ವರದಿ ಮಾಡಿರುತ್ತಾರೆ. .

3. ಕರ್ನಾಟಕವನ್ನು **"ಒಂದು ರಾಜ್ಯ ಹಲವು ಜಗತ್ತುಗಳು"** ಎಂದು ಸಮಂಜಸವಾಗಿ ಕರೆಯಲಾಗುತ್ತದೆ. ಇಲ್ಲಿ ಯಾವುದೇ ಪ್ರವಾಸಿಗರಿಗೆ ಪರಂಪರೆ, ಕಡಲತೀರಗಳು, ಸಾಹಸ, ಅರಣ್ಯ ಜೀವನ, ಪ್ರವಾಸೋದ್ಯಮ ನೀಡುವ ಏಕೈಕ ರಾಜ್ಯವಾಗಿದೆ. ಅಲ್ಲದೆ, ಹಂಪಿ ಮತ್ತು ಪಟ್ಟದಕಲ್ಲು ಎರಡು ವಿಶ್ವ ಪರಂಪರೆಯ ತಾಣಗಳಿರುವ ನೆಲೆಯಾಗಿದೆ. ಪ್ರವಾಸೋದ್ಯಮ ಮೂಲಸೌಕರ್ಯ, ಪ್ರಚಾರ ಮತ್ತು ಪ್ರವಾಸಿ ತಾಣ ಪ್ರಚಾರ ಕೈಗೊಳ್ಳಲು ಮತ್ತು ಪ್ರವಾಸೋದ್ಯಮ ವಲಯದಲ್ಲಿ ಖಾಸಗಿ ಹೂಡಿಕೆ ಪ್ರೋತ್ಸಾಹಿಸುವ ಉದ್ದೇಶ ಹೊಂದಿದೆ. ಇಲಾಖೆ ರಾಜ್ಯಾದ್ಯಂತ ಸುಮಾರು 319 ಪ್ರವಾಸಿ ತಾಣಗಳನ್ನು ಗುರುತಿಸಿದೆ. ಆದರೆ, ಈ ಪ್ರವಾಸಿ ತಾಣ/ಸರ್ಕ್ಯೂಟ್ಸ್‌ಗಳು ಭಾರತ ಪುರಾತತ್ವ, ರಾಜ್ಯದ ಪುರಾತತ್ವ, ತೋಟಗಾರಿಕೆ, ಜಲಸಂಪನ್ಮೂಲ, ಮುಜರಾಯಿ ಸಂಸ್ಥೆಗಳು, ಅರಮನೆ ಮಂಡಳಿ ಮುಂತಾದವುಗಳ ವ್ಯಾಪ್ತಿಗೆ ಒಳಪಡುವುದರಿಂದ ಇವುಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಲ್ಲಿ ಪ್ರವಾಸೋದ್ಯಮ ಇಲಾಖೆ ಬಹಳಷ್ಟು ಸವಾಲುಗಳನ್ನು ಎದುರಿಸುತ್ತಿದೆ.

4. ಕರ್ನಾಟಕದಲ್ಲಿ ಪ್ರವಾಸಿಗರಿಗೆ ಉತ್ತಮ ಅನುಭವ ಹೊಂದುವಂತಾಗಲು ಪ್ರವಾಸಿ ತಾಣಗಳಲ್ಲಿ/ಸರ್ಕ್ಯೂಟ್ಸ್‌ಗಳಲ್ಲಿ ಮೂಲಸೌಕರ್ಯ, ಫಲಕಗಳು, ವ್ಯಾಖ್ಯಾನ ಕೇಂದ್ರಗಳು, ಪ್ರವಾಸಿ ಸ್ನೇಹಿ ವಾಹನಗಳು, ಸೂಕ್ತ ಮಾರ್ಗದರ್ಶಿಗಳು ಇತ್ಯಾದಿ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ. ಪ್ರಾರಂಭಿಕವಾಗಿ ಇಲಾಖೆ 46 ತಾಣ/ಸರ್ಕ್ಯೂಟ್ಸ್‌ಗಳನ್ನು ಸಾಮಾಜಿಕ ಸಹಭಾಗಿತ್ವದಲ್ಲಿ ದತ್ತು ನೀಡುವ ಯೋಜನೆಗೆ ಗುರುತಿಸಿದೆ. ಸದರಿ ಪಟ್ಟಿಯು ವಿವರಣಾತ್ಮಕವಾಗಿದ್ದು, ಕಾರ್ಪೊರೇಟ್/ಸಾರ್ವಜನಿಕ ಉದ್ದಿಮೆಗಳು/ಸಂಸ್ಥೆಗಳು ದತ್ತು ತೆಗೆದುಕೊಳ್ಳುವ ಯಾವುದೇ ತಾಣಗಳ ಬಗ್ಗೆ ಸಲಹೆ ನೀಡಬಹುದಾಗಿರುತ್ತದೆ. ಪ್ರವಾಸಿ ತಾಣ/ಸರ್ಕ್ಯೂಟ್ಸ್‌ಗಳ ಪಟ್ಟಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

5. ಕಾರ್ಪೊರೇಟ್/ಸಾರ್ವಜನಿಕ ಉದ್ದಿಮೆಗಳು/ಸಂಸ್ಥೆಗಳು ದತ್ತು ತೆಗೆದುಕೊಳ್ಳುವ ಬಗ್ಗೆ ಸಲ್ಲಿಸುವ ಪ್ರಸ್ತಾವನೆಗಳನ್ನು ಕೆಳಕಂಡಂತೆ ಪರಿಶೀಲಿಸಿ ಅನುಮೋದನೆ ನೀಡುವ ಸಲುವಾಗಿ ಒಂದು ಸಮಿತಿಯನ್ನು ರಚಿಸುವಂತೆ ಪ್ರವಾಸೋದ್ಯಮ ನಿರ್ದೇಶಕರು ಕೋರಿರುತ್ತಾರೆ.

a. ದತ್ತು ತೆಗೆದುಕೊಳ್ಳುವ ಕಾರ್ಪೊರೇಟ್ ಘಟಕ/ಸಾರ್ವಜನಿಕ ಉದ್ದಿಮೆಗಳು ಅವರುಗಳು ಕೈಗೊಳ್ಳುವ ಚಟುವಟಿಕೆಗಳು, ಸಾಧ್ಯತೆ ಮತ್ತು ಆಯವ್ಯಯ ಮಾಹಿತಿಯನ್ನೊಳಗೊಂಡಂತೆ ಸಲ್ಲಿಸುವ ಪ್ರಸ್ತಾವನೆಯನ್ನು ಸಮಿತಿಯು ಅನುಮೋದಿಸತಕ್ಕದ್ದು.

b. ವಿವಿಧ ಅಥಾರಿಟಿಗಳ ಅನುಮೋದನೆ ಅವಶ್ಯವಿರುವುದನ್ನು ಖಚಿತಪಡಿಸಿಕೊಂಡು ಅದನ್ನು ಪಡೆಯಲು ಸಮಿತಿಯು ಕಾಲ–ಗಡುವನ್ನು ನಿಗಧಿಪಡಿಸತಕ್ಕದ್ದು.

c. ಅನುಬಂಧ–1ರಲ್ಲಿ ನಮೂದಿಸಿರುವ 46 ತಾಣಗಳ ಜೊತೆಗೆ ಬೇರೆ ಪ್ರವಾಸಿ ತಾಣಗಳನ್ನು ದತ್ತು ಕಾರ್ಯಕ್ರಮಕ್ಕೆ ಸಮಿತಿಯು ಗುರುತಿಸಬಹುದು.

d. ಪ್ರವಾಸಿ ತಾಣಕ್ಕೆ ಸೂಕ್ತ ಸೌಲಭ್ಯ ಮತ್ತು ಮೂಲ ಸೌಕರ್ಯಗಳನ್ನು ಒದಗಿಸುವ ಇತರೆ ವಿಷಯಗಳ ಮೇಲೆ ಸಮಿತಿಯು ಚರ್ಚಿಸಿ ನಿರ್ಧಾರವನ್ನು ಕೈಗೊಳ್ಳಬಹುದು.

6. ಈ ಕಾರ್ಯಕ್ರಮದಡಿ ಕಾರ್ಪೊರೇಟ್ ಸಂಸ್ಥೆಗಳು ಕಾರ್ಯಾಚರಣೆ ಮತ್ತು ನಿರ್ವಹಣೆ ಚಟುವಟಿಕೆಗಳಿಗೆ ಹಣಕಾಸು ವೆಚ್ಚವನ್ನು ಅಂತಹ ಸಂಸ್ಥೆಗಳೇ ನಿರ್ವಹಿಸಬೇಕೇ ಹೊರತು ಅನುದಾನವನ್ನು ಯಾವುದೇ ಸರ್ಕಾರಿ ಸಂಸ್ಥೆ/ಇಲಾಖೆಗೆ ವರ್ಗಾಯಿಸತಕ್ಕದ್ದಲ್ಲ ಹಾಗೂ ಸದರಿ ಕಾರ್ಯಕ್ರಮದಡಿ ಪ್ರವಾಸಿ ತಾಣವನ್ನು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸಿ 5 ವರ್ಷಗಳವರೆಗೆ ನಿರ್ವಹಣೆ ಮಾಡುವ ಸಂಬಂಧ ಅವಶ್ಯ ಅನುದಾನ ಒದಗಿಸುವ ಕುರಿತು ಖಚಿತಪಡಿಸಿಕೊಳ್ಳುವುದು.

7. ದತ್ತು ಕಾರ್ಯಕ್ರಮದ ಯೋಜನೆಯ ಅವಧಿ ನೋಡಲ್ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆ ದತ್ತು ಕಾರ್ಯಕ್ರಮದ ಸಂಬಂಧ MOU ಸಹಿ ಮಾಡಿದ ದಿನದಿಂದ 5 ವರ್ಷಗಳವರೆಗೆ ಇರುತ್ತದೆ. ಪರಸ್ಪರ ಒಪ್ಪಿಗೆಯಾದಲ್ಲಿ ಮುಂದಿನ 5 ವರ್ಷಗಳವರೆಗೆ ನವೀಕರಿಸಬಹುದು. ನಿಯತಕಾಲಿಕವಾಗಿ ದತ್ತು ಪಡೆದ ಯೋಜನೆಯ ಪ್ರತಿಯೊಂದು ಕಾರ್ಯಕ್ರಮದ ಅನುಷ್ಠಾನದ ಕುರಿತು ಮೌಲ್ಯಮಾಪನವನ್ನು ಪ್ರವಾಸೋದ್ಯಮ ಇಲಾಖೆ ನೇಮಿಸುವ ಸ್ವತಂತ್ರ ಮೌಲ್ಯಮಾಪಕರು ಮಾಡುತ್ತಾರೆ.

8. ಇಡೀ ದತ್ತು ಕಾರ್ಯಕ್ರಮದ ಮೇಲ್ವಿಚಾರಣೆಯನ್ನು ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕರು [ಪಿ.ಎಂ.ಯು] ನೋಡಲ್ ಅಧಿಕಾರಿಯಾಗಿ ನಿರ್ವಹಿಸುವುದು. ಯಾವ ಪ್ರವಾಸಿ ತಾಣ ಮತ್ತು ಸ್ಮಾರಕಗಳು ಭಾರತೀಯ ಪುರಾತತ್ವ ಸರ್ವೇಕ್ಷಣೆಗೆ ಒಳಪಟ್ಟಿದ್ದಲ್ಲಿ ಅದರ ಅಥವಾ ಸಂಬಂಧಿಸಿದ ನಿಯಂತ್ರಕರ ಅನುಮೋದನೆಯನ್ನು ಪ್ರವಾಸೋದ್ಯಮ ಇಲಾಖೆಯ ಜಂಟಿ ಪ್ರಯತ್ನದೊಂದಿಗೆ ಪಡೆಯುವುದು.

9. ಮೇಲಿನಂತೆ, ಕಾರ್ಪೊರೇಟ್ ಸಾಮಾಜಿಕ ಸಹಭಾಗಿತ್ವದಡಿಯಲ್ಲಿ ಅನುಬಂಧ–1ರಲ್ಲಿ ನಮೂದಿಸಿರುವ 46 ಪ್ರವಾಸಿ ತಾಣಗಳ/ಸರ್ಕ್ಯೂಟ್ಸ್‌ಗಳ ದತ್ತು ತೆಗೆದುಕೊಳ್ಳುವ ಕಾರ್ಯಕ್ರಮ ಪ್ರಾರಂಭಿಸಲು ಸರ್ಕಾರದ ಅನುಮೋದನೆಯನ್ನು ಪ್ರವಾಸೋದ್ಯಮ ನಿರ್ದೇಶಕರು ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಪ್ರಇ 98 ಪ್ರವಾಯೋ 2014, ಬೆಂಗಳೂರು, ದಿನಾಂಕ: 16ನೇ ಸೆಪ್ಟೆಂಬರ್ 2014.

ಮೇಲೆ ವಿವರಿಸಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಅನುಬಂಧ–1ರಲ್ಲಿ ಗುರುತಿಸಿರುವ 46 ಪ್ರವಾಸಿ ತಾಣ/ಸರ್ಕ್ಯೂಟ್ಸ್ ಅಥವಾ ಅದರ ಭಾಗಗಳನ್ನು ಅನುಕ್ರಮವಾಗಿ ಅನುಬಂಧ–2 ಮತ್ತು 3ರಲ್ಲಿ ನಿಗದಿಪಡಿಸಿರುವ ದತ್ತು ಕಾರ್ಯಕ್ರಮದ ಉಪಕ್ರಮಗಳ/ಚಟುವಟಿಕೆಗಳನ್ವಯ ಮತ್ತು ಕಾರ್ಯಕ್ರಮ ಅಳವಡಿಸಿಕೊಳ್ಳುವ ಯಾಂತ್ರಿಕ ವ್ಯವಸ್ಥೆಯನ್ವಯ ಕಾರ್ಪೊರೇಟ್ ಸಾಮಾಜಿಕ ಸಹಭಾಗಿತ್ವದಡಿಯಲ್ಲಿ ಈ ಕೆಳಕಂಡ ನಿಬಂಧನೆಗಳೊಂದಿಗೆ ದತ್ತು ನೀಡಲು ಸರ್ಕಾರದ ಅನುಮೋದನೆ ನೀಡಲಾಗಿದೆ.

1) ದತ್ತು ಕಾರ್ಯಕ್ರಮವು ಅನುಬಂಧ–2ರಲ್ಲಿ ನೀಡಿರುವಂತೆ ಪ್ರವಾಸಿ ಸೌಲಭ್ಯ ಇತ್ಯಾದಿಗಳನ್ನು ಸೃಜಿಸುವುದರೊಂದಿಗೆ ಅವುಗಳ ನಿರ್ವಹಣೆ ಮಾಡುವ ಪ್ರಯತ್ನವಾಗಿರಬೇಕು.
2) ದತ್ತು ಕಾರ್ಯಕ್ರಮದ ಯೋಜನೆಯ 5 ವರ್ಷಗಳ ಅವಧಿಗೆ ಮತ್ತು ಮುಂದಿನ 5 ವರ್ಷಗಳವರೆಗೆ ನವೀಕರಿಸಲು.
3) ದತ್ತು ಕಾರ್ಯಕ್ರಮದಡಿ ಕಾರ್ಪೊರೇಟ್ ಸಂಸ್ಥೆಗಳು ಯೋಜನೆಯ ಅನುಷ್ಠಾನ ಮತ್ತು ನಿರ್ವಹಣೆ ಸಂಬಂಧ ಪ್ರತ್ಯೇಕವಾಗಿ ಅನುದಾನ ನಿಗದಿಪಡಿಸಿಕೊಂಡು ಸದರಿ ಕಾರ್ಯಕ್ರಮದ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಪ್ರವಾಸೋದ್ಯಮ ನಿರ್ದೇಶಕರಿಗೆ ವರದಿ ಮಾಡುವುದು.

ಪ್ರಸ್ತಾವನೆಗಳನ್ನು ಪರಿಶೀಲನೆಮಾಡಿ ಅನುಮೋದನೆ ನೀಡುವ ಸಂಬಂಧ ಸರ್ಕಾರವು ಕೆಳಕಂಡ ಸದಸ್ಯರನ್ನೊಳಗೊಂಡ ಯೋಜನಾ ಅನುಷ್ಠಾನ ಸಮಿತಿಯನ್ನು ರಚಿಸಿದೆ:

1.	ಪ್ರವಾಸೋದ್ಯಮ ಸಚಿವರು	–	ಅಧ್ಯಕ್ಷರು
2.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ.	–	ಸದಸ್ಯರು
3.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ.	–	ಸದಸ್ಯರು
4.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.	–	ಸದಸ್ಯರು
5.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ.	–	ಸದಸ್ಯರು
6.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.	–	ಸದಸ್ಯರು
7.	ನಿರ್ದೇಶಕರು, ಭಾರತೀಯ ಸರ್ವೇಕ್ಷಣಾ ಇಲಾಖೆ, ಭಾರತ ಸರ್ಕಾರ.	–	ಸದಸ್ಯರು
8.	ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ.	–	ಸದಸ್ಯರು
9.	ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ.	–	ಸದಸ್ಯರು
10.	ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.	–	ಸದಸ್ಯರು
11.	ಆಯುಕ್ತರು, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ.	–	ಸದಸ್ಯರು
12.	ಆಹ್ವಾನಿತರು – ಸಮಿತಿಯ ಇಚ್ಛೆಗನುಸಾರ.	–	ಸದಸ್ಯರು
13.	ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ.	–	ಸಂಚಾಲಕರು

ಮೇಲ್ಕಂಡ ಸಮಿತಿಯನ್ನು –

ಎ) ಕಾರ್ಪೊರೇಟ್ ಘಟಕಗಳಿಂದ ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ಅನುಮೋದಿಸಲು;

ಬಿ) ಅವಶ್ಯವಿದ್ದಲ್ಲಿ, ಇತರೆ ಯಾವುದೇ ಪ್ರವಾಸಿ ತಾಣಗಳನ್ನು ಸೇರಿಸಲು;

ಸಿ) ಯಾವುದೇ ಇತರೆ ಅಥಾರಿಟಿಗಳ ಸಮ್ಮತಿ/ಅನುಮತಿ ಪಡೆಯುವ ಅಗತ್ಯತೆ ಬಗ್ಗೆ ಖಚಿತಪಡಿಸಿಕೊಳ್ಳಲು ಮತ್ತು ಕೋರಲು;

ಡಿ) ಯೋಜನೆಯ ಅನುಮೋದನೆಗೆ ಸಹಮತಿ ಅಥವಾ ಪರಿಣಿತಿ ಅವಶ್ಯವಿರುವ ಅನುಭವಿಗಳ ಸದಸ್ಯರುಗಳನ್ನು ಮತ್ತು ಹೂಡಿಕೆದಾರರ ಕೋ–ಆಪ್ಟ್ ಮಾಡಿಕೊಳ್ಳಲು;

ಇ) ಯೋಜನೆಯ ಅನುಷ್ಠಾನದ ಹಿತದೃಷ್ಟಿಯಿಂದ ಇತರೆ ಯಾವುದೇ ತೀರ್ಮಾನಗಳನ್ನು ಕೈಗೊಳ್ಳಲು ರಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಮೋಹನ್. ಕೆ

ಸರ್ಕಾರದ ಅಧೀನ ಕಾರ್ಯದರ್ಶಿ

ಪ್ರವಾಸೋದ್ಯಮ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ: ಪ್ರಇ 98 ಪ್ರವಾಯೋ 2014, ದಿನಾಂಕ:16–09–2014ಕ್ಕೆ ಅನುಬಂಧ–1

ದತ್ತು ಕಾರ್ಯಕ್ರಮದ ಅಂಗವಾಗಿ ಗುರುತಿಸಿರುವ ಪ್ರವಾಸಿ ತಾಣಗಳ ಪಟ್ಟಿ

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಪ್ರವಾಸಿ ಸ್ಥಳ	
1.	ಬಾಗಲಕೋಟೆ	ಬಾದಾಮಿ	1.	ಬಾದಾಮಿ
			2.	ಪಟ್ಟದಕಲ್ಲು
			3.	ಬನಶಂಕರಿ
			4.	ಮಹಾಕೂಟ
		ಹುನಗುಂದ	5.	ಐಹೊಳೆ

2.	ಬೆಂಗಳೂರು ನಗರ	ಬೆಂಗಳೂರು	6.	ವೆಂಕಟಪ್ಪಾ ಆರ್ಟ್ ಗ್ಯಾಲರಿ
3.			7.	ಕಬ್ಬನ್ ಪಾರ್ಕ್ ಹತ್ತಿರ ಅಕ್ವೇರಿಯಮ್
4.			8.	ಲಾಲ್‌ಬಾಗ್
5.			9.	ಟಿಪ್ಪು ಅರಮನೆ ಕೋಟೆ
6.			10.	ವಿಶ್ವೇಶ್ವರಯ್ಯ ಮ್ಯೂಸಿಯಂ
7.			11.	ಫ್ರೀಡಂ ಪಾರ್ಕ್
8.		ಬೆಂಗಳೂರು ದಕ್ಷಿಣ	12.	ಮುತ್ಯಾಲಮಡುವು
9.			13.	ಬನ್ನೇರುಘಟ್ಟ
10.	ಬೆಂಗಳೂರು ಗ್ರಾಮಾಂತರ	ನೆಲಮಂಗಲ	14.	ಶಿವಗಂಗೆ
11.	ಬೆಳಗಾವಿ	ಬೈಲಹೊಂಗಲ	15.	ಕಿತ್ತೂರು
12.	ಬಳ್ಳಾರಿ	ಹೊಸಪೇಟೆ	16.	ಹಂಪಿ
13.			17.	ತುಂಗಭದ್ರಾ ಡ್ಯಾಂ
14.	ಬೀದರ್	ಬೀದರ್	18.	ಬೀದರ್ ಕೋಟೆ
15.	ಬಿಜಾಪುರ	ಬಿಜಾಪುರ	19.	ಗೋಲ್‌ಗುಂಬಜ್ ಮತ್ತು ಇನ್ನಿತರ ತಾಣಗಳು.
16.	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	20.	ನಂದಿ ಬೆಟ್ಟ
17.			21.	ಟಿಪ್ಪುವಿನ ಜನ್ಮ ಸ್ಥಳ ಭೋಗನಂದೀಶ್ವರ
18.	ಚಿಕ್ಕಮಗಳೂರು	ತರೀಕೆರೆ	22.	ಕೆಮ್ಮಣ್ಣುಗುಂಡಿ
19.	ಚಿತ್ರದುರ್ಗ	ಹಿರಿಯೂರು	23.	ವಾಣಿವಿಲಾಸ ಸಾಗರ
20.	ದಾವಣಗೆರೆ	ಚನ್ನಗಿರಿ	24.	ಶಾಂತಿ ಸಾಗರ
21.	ಗದಗ	ಗದಗ	25.	ಲಕ್ಕುಂಡಿ
22.	ಹಾಸನ	ಬೇಲೂರು	26.	ಬೇಲೂರು
			27.	ಹಳೆಬೀಡು
23.		ಚೆನ್ನರಾಯಪಟ್ಟಣ	28.	ಶ್ರವಣಬೆಳಗೋಳ
24.	ಕೊಡಗು	ಮಡಿಕೇರಿ	29.	ರಾಜಾಸೀಟ್
			30.	ಅಬ್ಬೆ ಫಾಲ್ಸ್
25.	ಕೊಪ್ಪಳ	ಗಂಗಾವತಿ	31.	ಆನೆಗುಂದಿ
26.	ಮಂಡ್ಯ	ಮದ್ದೂರು	32.	ಕೊಕ್ಕರೆಬೆಳ್ಳೂರು
		ಶ್ರೀರಂಗಪಟ್ಟಣ	33.	ಶ್ರೀರಂಗಪಟ್ಟಣ
			34.	ಬೃಂದಾವನ ಉದ್ಯಾನ
			35.	ರಂಗನತಿಟ್ಟು
			36.	ಬಲಮುರಿ ಫಾಲ್ಸ್ / ಸಂಗಂ
27.	ಮೈಸೂರು	ಟಿ.ನರಸೀಪುರ	37.	ತಲಕಾಡು
			38.	ಸೋಮನಾಥಪುರ
		ನಂಜನಗೂಡು	39.	ನಂಜನಗೂಡು
28.	ರಾಯಚೂರು	ರಾಯಚೂರು	40.	ರಾಯಚೂರು ಕೋಟೆ
29.	ರಾಮನಗರ	ಕನಕಪುರ	41.	ಮೇಕೆದಾಟು
30.	ಶಿವಮೊಗ್ಗ	ಸಾಗರ	42.	ಜೋಗ್ ಫಾಲ್ಸ್
31.	ಉಡುಪಿ		43.	ಮಲ್ಪೆ ಬೀಚ್
			44.	ಸೇಂಟ್ ಮೇರಿ ದ್ವೀಪ
32.	ಉತ್ತರ ಕನ್ನಡ		45.	ಟ್ಯಾಗೋರ್ ಬೀಚ್
			46.	ಮುರುಡೇಶ್ವರ

ಮೋಹನ್. ಕೆ

ಸರ್ಕಾರದ ಅಧೀನ ಕಾರ್ಯದರ್ಶಿ

ಪ್ರವಾಸೋದ್ಯಮ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ: ಪ್ರಇ 98 ಪ್ರವಾಯೋ 2014 ದಿನಾಂಕ: 16-09-2014ಕ್ಕೆ ಅನುಬಂಧ-II

ಈ ಕಾರ್ಯಕ್ರಮದಡಿ ರೂಪಿಸಿರುವ ಉಪಕ್ರಮಗಳು/ಚಟುವಟಿಕೆಗಳು ಈ ಕೆಳಕಂಡಂತಿರುತ್ತವೆ.

1. ಪ್ರವಾಸಿ ತಾಣ/ಸರ್ಕ್ಯೂಟ್ಸ್ ಸುತ್ತಮುತ್ತ ಸ್ವಚ್ಛ ಶೌಚಾಲಯ, ಸ್ವಚ್ಛತೆ, ಆಹಾರ ಮಳಿಗೆ ಅಂಗಡಿಗಳನ್ನು ಒದಗಿಸುವುದು ಅಲ್ಲದೆ, ಸೌಲಭ್ಯಗಳನ್ನು ನಿರ್ವಹಿಸುವುದು.
2. ಸ್ಥಳದ ಐತಿಹಾಸಿಕ/ಸಾಂಸ್ಕೃತಿಕ ಪ್ರಾಮುಖ್ಯತೆ ಬಗ್ಗೆ ಮಾರ್ಗದರ್ಶಿಗಳಿಗೆ ತರಬೇತಿ.
3. ಹಾಲಿ ಇರುವ ಯಾವುದೇ ವ್ಯಾಖ್ಯಾನ ಕೇಂದ್ರಗಳು/ವಸ್ತು ಸಂಗ್ರಹಾಲಯಗಳ ಉನ್ನತೀಕರಿಸುವುದು.
4. ಅನೇಕ ಭಾಷೆಗಳಲ್ಲಿ ಫಲಕಗಳು ಮೊಬೈಲ್ ಅಪ್ಲಿಕೇಷನ್ ವಿಡಿಯೋ ಗೈಡ್‌ಗೆ ಅವಕಾಶ.
5. ಹಿರಿಯ ನಾಗರೀಕರಿಗೆ ವಿದ್ಯುತ್ ಕಾರುಗಳು ಒದಗಿಸುವ ಹಾಗೂ ಅವುಗಳನ್ನು ನಿರ್ವಹಿಸಲು.
6. ಸ್ಮಾರಕಗಳನ್ನು ಕಾಂತಿಗೊಳಿಸುವುದು.
7. ಶೌಚಾಲಯಗಳಿಗೆ ಮೆರಗು ಕೊಡುವುದು, ಘನತ್ಯಾಜ್ಯ ನಿರ್ವಹಣೆ ಅಭ್ಯಾಸ ಅಳವಡಿಸುವುದು.
8. ಯಾವುದೇ ಜಲಾಶಯಗಳ ಕಾಂತಿವರ್ಧಿಸುವುದು.
9. ಸ್ಮಾರಕಗಳ ಸಂರಕ್ಷಣೆ ಮತ್ತು ಮರುಸ್ಥಾಪನೆ (ASI/SAD ರವರ ಅನುಮೋದನೆಯೊಂದಿಗೆ).

ಆದಾಗ್ಯೂ ಮೇಲ್ಕಂಡ ಪಟ್ಟಿಯು ವಿವರಣಾತ್ಮಕವಾಗಿದ್ದು, ಅಂತಿಮವಾಗಿ ಕೈಗೊಳ್ಳಬೇಕಾಗಿರುವ ಚಟುವಟಿಕೆಗಳ ಬಗ್ಗೆ ಪ್ರಕರಣದಿಂದ ಪ್ರಕರಣದ ಮೇಲೆ ಅವಲಂಬಿತವಾಗಿರುತ್ತದೆ.

ಮೋಹನ್. ಕೆ

ಸರ್ಕಾರದ ಅಧೀನ ಕಾರ್ಯದರ್ಶಿ

ಪ್ರವಾಸೋದ್ಯಮ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ: ಪ್ರಇ 98 ಪ್ರವಾಯೋ 2014 ದಿನಾಂಕ: 16-09-2014ಕ್ಕೆ ಅನುಬಂಧ-III

ದತ್ತು ಕಾರ್ಯಕ್ರಮದ ಯಾಂತ್ರಿಕ ವ್ಯವಸ್ಥೆ.

1) ಇಲಾಖೆ ಗುರುತಿಸಿರುವ ತಾಣಗಳನ್ನು/ಸರ್ಕ್ಯೂಟ್ಸ್‌ಗಳನ್ನು ಕಾರ್ಪೊರೇಟ್/ಸಾರ್ವಜನಿಕ ಉದ್ದಿಮೆಗಳಿಗೆ ಪ್ರದರ್ಶಿಸಿ ಈ ತಾಣಗಳನ್ನು ದತ್ತು ತೆಗೆದುಕೊಂಡು ನಿರ್ವಹಣೆ ಮಾಡುವ ಬಗ್ಗೆ ಅವರ ಬೆಂಬಲ ಕೋರುವುದು. ಕಾರ್ಯಕ್ರಮವನ್ನು ಒಂದೊಂದೇ ಕಾರ್ಪೊರೇಟ್‌ಗಳ ಜೊತೆಯಲ್ಲಿ ಸಭೆ ನಡೆಸುವುದರೊಂದಿಗೆ ಅಥವಾ ರೋಡ್ ಷೋ ನಡೆಸುವುದರೊಂದಿಗೆ ಜನಪ್ರಿಯಗೊಳಿಸುವುದು.
2) ತಾಣಗಳ/ಸ್ಮಾರಕಗಳನ್ನು/ಸರ್ಕ್ಯೂಟ್ಸ್‌ಗಳನ್ನು ದತ್ತು ತೆಗೆದುಕೊಂಡು ಸೌಲಭ್ಯಗಳನ್ನು ಸುಧಾರಣೆ ಮಾಡಲು ಆಸಕ್ತಿ ವ್ಯಕ್ತಪಡಿಸುವ ಯಾವುದೇ ಕಾರ್ಪೊರೇಟ್/ಸಾರ್ವಜನಿಕ ಉದ್ದಿಮೆಗಳು ಅದರ CSR ಭಾಗವಾಗಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ. ಇಲಾಖೆಯ ನೋಡಲ್ ಅಧಿಕಾರಿಯಾದ ಜಂಟಿ ನಿರ್ದೇಶಕರು (ಪಿಎಂಯು) ಮತ್ತು ಸಂಬಂಧಿಸಿದ ಕಾರ್ಪೊರೇಟ್/ಸಾರ್ವಜನಿಕ ಉದ್ದಿಮೆಗಳ ಪ್ರತಿನಿಧಿಯೊಂದಿಗೆ ಜಂಟಿ ತಪಾಸಣೆ ಮಾಡುವುದು.
3) ವಸ್ತು ಸಂಗ್ರಹಾಲಯ, ಮತ್ಸಾಲಯ, ಉದ್ಯಾನವನಗಳು, ಜಲಾಶಯಗಳು ಇತ್ಯಾದಿ ಒಳಗೊಂಡಂತೆ ಯಾವುದೇ ತಾಣಗಳ ದತ್ತು/ಉನ್ನತೀಕರಿಸಲು ಮುಂದೆ ಬಂದಂತಹ ಅಸ್ತಿತ್ವವುಳ್ಳ ಕಾರ್ಪೊರೇಟ್‌ಗಳಿಗೆ ಸಂಬಂಧಿಸಿದ ಮಾತೃ ಇಲಾಖೆ/ತೋಟಗಾರಿಕೆ ಇಲಾಖೆಯ ಸಹಮತಿಯೊಂದಿಗೆ ಪ್ರವಾಸೋದ್ಯಮ ಇಲಾಖೆ ವತಿಯಿಂದ ಎಲ್ಲ ಸಹಕಾರ ಮತ್ತು ನೆರವು ಒದಗಿಸುವುದು.
4) CSR ಪ್ರಾರಂಭಿಸುವ ಪ್ರಸ್ತಾವನೆಗಳಿಗೆ ದತ್ತು ಕಾರ್ಯಕ್ರಮದ ಯೋಜನೆಯಡಿ ಶೀಘ್ರ ಅನುಮೋದನೆ ಪಡೆಯಲು ಅನುಕೂಲವಾಗುವಂತೆ ಯೋಜನಾ ಕಾರ್ಯಗತ ಸಮಿತಿಯನ್ನು ರಚಿಸಲಾಗುವುದು. ಈ ಸಮಿತಿಯಲ್ಲಿ ಮಾನ್ಯ ಪ್ರವಾಸೋದ್ಯಮ ಸಚಿವರು ಮುಖ್ಯಸ್ಥರಾಗಿದ್ದು ಆ ತಾಣ/ಸರ್ಕ್ಯೂಟ್ಸ್ ವ್ಯಾಪ್ತಿಯ ಅಡಿಯಲ್ಲಿ ಬರುವ ಇತರೆ ಇಲಾಖೆಗಳ ಸ್ಟೇಕ್ ಹೋಲ್ಡರ್ಸ್‌ಗಳಾದ ಎಎಸ್ಐ, ರಾಜ್ಯ ಪುರಾತತ್ವ, ಕನ್ನಡ ಮತ್ತು ಸಂಸ್ಕೃತಿ, ತೋಟಗಾರಿಕೆ, ಅರಣ್ಯ, ನೀರಾವರಿ ನಗರಾಭಿವೃದ್ಧಿ/ಆರ್‌ಡಿಪಿಆರ್, ಧಾರ್ಮಿಕ ಸಂಸ್ಥೆಗಳು, ಕಂದಾಯ ಇಲಾಖೆಗಳನ್ನು ತೊಡಗಿಸಿಕೊಳ್ಳಲಾಗುವುದು. ಅದೂ ಅಲ್ಲದೆ, ಆ ಪ್ರವಾಸಿ ತಾಣ/ಸರ್ಕ್ಯೂಟ್ಸ್ ಯಾವುದೇ ನಿರ್ದಿಷ್ಟ ಸಂಸ್ಥೆ/ಇಲಾಖೆ/ಮಂಡಳಿ ವಶದಲ್ಲಿದ್ದರೆ ಅಂತಹ ಯಾವುದೇ ಇಲಾಖೆ/ಮಂಡಳಿಯನ್ನು ಸಹ ಸಮಿತಿಯು ಆಯ್ಕೆ ಮಾಡಿಕೊಳ್ಳಬಹುದು.
5) ಯೋಜನೆಗೆ ಸಂಬಂಧಿಸಿದ ಎಲ್ಲಾ ಅನುಮೋದನೆಗಳು, ಕಾಯಿದೆಗಳ ಅನುಸರಣೆ, ಪ್ರಾಚ್ಯವಸ್ತು, ಪರಂಪರೆ ಸೂತ್ರಗಳನ್ನು ಅನುಸರಣೆ ಮಾಡುವ ಮತ್ತು ಅವುಗಳ ಅವಶ್ಯ ರಕ್ಷಣೆ ಮಾಡುವ ಜವಾಬ್ದಾರಿಯು ಆ ತಾಣ/ಸ್ಮಾರಕ ಒಳಪಡುವ ಇಲಾಖೆಗೆ ಸೇರಿದ್ದಾಗಿರುತ್ತದೆ.

ಮೋಹನ್. ಕೆ

ಸರ್ಕಾರದ ಅಧೀನ ಕಾರ್ಯದರ್ಶಿ

ಪ್ರವಾಸೋದ್ಯಮ ಇಲಾಖೆ

TOURISM SECRETARIAT

Subject: Approval to initiate Programme for Adoption of Tourist Destination in collaboration with Corporates.

Read: File No. Pra E /Yo-2/226/2013-14 of Director of Tourism Department.

PREAMBLE:

In the budget speech of 2014-15 Hon'ble Chief Minister has announced the adoption of tourist destination/circuits programme in collaboration with Corporates.

2. The Director of Tourism has reported that Government of India launched "**Campaign Clean India**" programme and also took up a major social awareness, media campaign under the brand '**Athithidevobhava'**. by involving public and private stakeholders as part of their Corporate Social Responsibility. India Tourism Development Corporation (ITDC) adopted Qutab Minar, New Delhi as a pilot project under Campaign Clean India. ONGC also expressed their willingness to adopt the major monuments under CSR such as Taj Mahal at Agra, Ellora caves. in Maharashtra, Elephant caves in Maharashtra, Red Fort in Delhi, Golkonda Fort Hyderabad Mahabalipuram.

3. Karnataka aptly called as "**One State Many Worlds**" is the only state that offers all types of experience to any tourists, be it heritage, beaches, pilgrims, adventure, wild life etc., It is home to two world heritage sites at Hampi and Pattadakallu and several equally important heritage sites throughout Karnataka. Department of Tourism is mandated to provide basic tourism infrastructure, undertake promotion and publicity of tourist destinations and encourage private investment in tourism sector. The Department has identified nearly 319 tourist destinations across the State where tourist facilities need to be provided/expanded or upgraded. However, there are challenges faced by the Department in undertaking developmental works as these tourist destinations are either owned or regulated by Archaeology Survey of India, State Archaeology, Horticulture, Water Resources Department, Muzarai institutions, Mysore Palace Board etc.,

4 In order to ensure better experience to the tourists in Karnataka, proper facilities such as basic amenities, signages, interpretation centres, tourist friendly vehicles, proper guides etc., are required at these tourist destinations. The Department has initially identified 46 destinations for providing such facilities by the Corporate Sector. The list is not an exhaustive one and corporates/PSUs can suggest any destination they want to adopt. The list of destinations is enclosed at Annexure-I

5. Director of Tourism has proposed a Committee to examine and approve the proposals received from the Corporate Sector as under:

a. Committee shall approve the proposal submitted by the Corporate entity/PSUs should include the activities that are proposed along with their feasibility and budget outlay.

b. Committee shall ensure if any approval is required from various authorities, the committee shall fix the timelines for obtaining the same.

c. Committee can identify other tourist destinations for adoption in addition to the 46 destination indicated in the Annexure-I.

d. Committee can discuss and decide any other issues concerning the facilities and infrastructure to be provided to the tourist destination.

6. Under this programme, Corporates will finance the activities, operations and maintain the facilities on their own rather than transferring the funds to any Government body/department. Corporate willing to adopt such tourist destination will also ensure adequate funding is provided to improve and maintain the facilities for a minimum period of 5 years.

7. Duration of adoption would be for a period of 5 years after signing MoU with the Nodal Department and Department of Tourism. The MoU will be renewed for period of another 5 years if it is mutually agreed between the parties. An independent evaluator appointed by the Director of Tourism will periodically evaluate the implementation of the programme.

8. Joint Director (PMU) of Directorate of Tourism will be the Nodal Officer to oversee the adoption programme. Wherever tourist destinations and monuments either belonging to Archaeological Survey of India or require regulatory consent, in such cases due approvals shall be obtained from the concerned authority through joint efforts of Tourism Department.

9. Accordingly, the Director of Tourism has solicited the approval of the Government to launch a Programme for Adoption of Tourist Destination in collaboration with Corporates for the 46 tourist destinations /circuits as mentioned in Annexure-I

After detailed examination of the proposal Government is pleased to issue the following order:

Government Order No. TD 98 TTT 2014 Bangalore,Dated:16-09-2014.

In the circumstances explained above approval of the Government is accorded for adoption of identified 46 tourist destinations /circuits or part there of as detailed in Annexure-I with the initiatives/activities envisaged under this programme and the mechanism for adoption as per Annexure-II and Annexure-III respectively, with the following conditions.

1) The adoption programme will endeavor to create tourist facilities etc., as given in the Annexure-II including the maintenance thereof.

2) The duration of the adoption is 5 years and further extended by 5 years.

3) Corporates under CSR programme shall earmark the funds separately for implementation and maintenance of programme and financial and physical progress of the programme shall be reported to the Director of Tourism.

To examine and approve the proposals, Government is pleased to constitute a Project Implementation Committee with the following members.

1	Minister for Tourism	- Chairman
2	Additional Chief Secretary to Government Tourism Department	- Member
3	Additional Chief Secretary to Government Commerce & Industry Department	- Member
4	Additional Chief Secretary to Government, Forest, Ecology and Environment Department.	- Member
5	Principal Secretary to Government, Finance Dept.	- Member
6	Principal Secretary to Government, Kannada & Culture, Information Department.	- Member
7	Director, Archaeological Survey of India, GOI	-Member
8	Principal Chief Conservator of Forest, Forest Department.	- Member
9	Director, Commerce & Industry Department	- Member
10	Director, Kannada & Culture Dept.	- Member
11	Commissioner, Archaeology, Museums and Heritage Department	- Member
12	Invitees – as desired by the Committee	Member
13	Director, Tourism Department	- convener

The above Committee is constituted to –

a. Approve the proposals received from the corporate sector.

b. Include any other tourist destinations, if required.

c. Solicit and ensure any approvals and consent required by various authorities.

d. Co-opt members and stakeholders whose consent or expertise is required for approval of the project.

e. Take any other decision to facilitate implementation of the programme.

By Order and in the name of the Governor of Karnataka

Mohan. K

Under Secretary to Government

Tourism Department

Annexure-I

To Government Order No. TD 98 TTT 2014 Dated:16-09-2014

List of Tourist destinations under Adoption Programme

Sl no.	District	Taluk	Tourist Destination	
1.	Bagalkot	Badami	1.	Badami
			2.	Pattadkal
			3.	Banashankari
			4.	Mahakoota
		Hungund	5.	Aihole
2.	Bangalore Urban	Bangalore	6.	Venkatappa Art Gallery
			7.	Aquarium near Cubbon Park
			8.	Lalbagh
			9.	Tippu Palace Fort
			10.	Vishveshwaraiah Museum
			11.	Freedom Park
		Bangalore South	12.	Muthyalamaduvu
			13.	Bannerghatta
3.	Bangalore Rural	Nelamangala	14.	Shivagange

4.	Belgaum	Bailahongala	15.	Kittur
5.	Bellary	Hospet	16.	Hampi
			17.	Tungabhadra Dam
6.	Bidar	Bidar	18.	Bidar Fort
7.	Bijapur	Bijapur	19.	Golgumbaz & other Destinations
8.	Chikkaballapura	Chikkaballapura	20.	Nandi hills
			21.	Tippu's Birth Place Bhoganandishwara
9.	Chikmagalur	Tarikere	22.	Kemmannugundi
10.	Chitradurga	Hiriyur	23.	Vanivilas Sagar
11.	Davangere	Channagiri	24.	Shanthisagar
12.	Gadag	Gadag	25.	Lakkundi
13.	Hassan	Belur	26.	Belur
			27.	Halebidu
		Channarayapatna	28.	Shravanabelagola
14.	Kodagu	Madikeri	29.	Raja Seat
			30.	Abbey Falls
15.	Koppal	Gangavathi	31.	Anegundi
16.	Mandya	Maddur	32.	Kokkarebellur
		Srirangapatna	33.	Srirangapatna
			34.	Brindavan Gardens
			35.	Ranganathittu
			36.	Balmuri Falls/Sangam
17.	Mysore	T.Narasipura	37.	Talkad
			38.	Somanathpur
		Nanjangud	39.	Nanjangud
18.	Raichur	Raichur	40.	Raichur Fort
19.	Ramanagara	Kanakapura	41.	Mekedatu
20.	Shimoga	Sagar	42.	Jog falls
21.	Udupi	-	43.	Malpe Beach
			44.	St. Mary's Island
22.	Uttara Kannada	-	45.	Tagore Beach
			46.	Murudeshwara

Mohan. K

Under Secretary to Government

Tourism Department

Annexure II

To Government Order No.TD 98 TTT 2014 dt: 16-09-2014

The initiatives/activities envisaged under this programme

1. Providing and maintaining the facilities in and round the destination such as clean toilets, cleanliness, souvenir shops, food courts.
2. Training of guides on historical/cultural importance of the place.
3. Upgrading any existing interpretation centres/museums.
4. Providing signages, mobile applications, audio guides in different languages.
5. Providing electric cars for senior citizens and maintain them.
6. Illumination of monuments.
7. Refurbishing the toilets, implementing Solid Waste Management practice.
8. Rejuvenating any water bodies.
9. Conservation and restoration of monuments (with the approval of ASI/SAD)

The above list is illustrative and activities that are to be undertaken would depend on a case to case basis and to be approved by the Committee.

Mohan. K
Under Secretary to Government
Tourism Department

Annexure-III

To Government Order No.TD 98 TTT 2014 dt: 16-09-2014

Mechanism for adoption of programme:

1. The destinations that are shortlisted by the Department will be presented to the corporates/public undertakings and seek their support in adoption and maintenance of these destinations. This would be popularized either by one to one meeting with Corporates or by having road shows.

2. Any corporate entity/PSU interested in adopting the destinations/monuments and improving the facilities will need to submit a proposal to the department as part of their CSR. Joint inspection would be conducted by Joint Director (PMU) the Nodal Officer of the department and the nominated member of the Corporate entity /PSU

3. All cooperation and assistance would be provided to the corporate entity who intend to adopt/upgrade and/or maintain any destination by the Department of Tourism including museums, aquariums, parks, water bodies lakes etc**.,** subject to the consent of the parent/Horticulture Department.

4. In order to facilitate speedy approvals and adoption programme, a Project Implementation committee will be set up to approval the proposals of such CSR initiatives. The Committee will be headed by Hon'ble Tourism Minister and involve all the stakeholders from various departments pertaining to that destinations such as ASI, State Archeology, Kannada and Culture, Horticulture, Forest, Water Resources, Urban Development Department/RD&PR, Mujarai institutions, Revenue Department. The Committee also can co-opt any other department/board if the destination is owned or tourist destination owned by particular agency/department/board.

5. All necessary approvals compliance with regulation, archeology and heritage norms, necessary safe guards in carrying out these initiatives shall be the responsibility of the respective department to whom these destinations/monuments belong.

Mohan. K
Under Secretary to Government
Tourism Department

PR. 779
SC. 200

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ನರಹರಿ, ಸಿಹೆಚ್‌ಸಿ–316, ಕೊಂಚಾವರಂ ಪೊಲೀಸ್ ಠಾಣೆ, ಕಲಬುರಗಿ ಜಿಲ್ಲೆ ಇವರ ಪರಿಷ್ಕರಣ ಮೇಲ್ಮನವಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಕಲಬುರಗಿ ಜಿಲ್ಲೆ, ಕಲಬುರಗಿ ಇವರ ಆದೇಶ ಸಂಖ್ಯೆ: ಪಿಆರ್/254/ಗು/2012 (ಡಿಓಬಿ ಸಂ. 1504/2013) ದಿನಾಂಕ 27.07.2013
2) ಮೇಲ್ಮನವಿ ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಕಲಬುರಗಿ ಇವರ ಆದೇಶ ಸಂಖ್ಯೆ: ಅಪೀಲು/72/ಈವ/2013 (ಆ.ಪು.ಸಂ.658/ಈವ/2013) ದಿನಾಂಕ 30.11.2013
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 02.02.2014
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)93/2013–14 ದಿನಾಂಕ: 02.06.2014
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 127 ಸಿಎನ್‌ಎಸ್ 2014 ದಿನಾಂಕ: 18.09.2014

ಪ್ರಸ್ತಾವನೆ:

ಶ್ರೀ ನರಹರಿ, ಸಿಹೆಚ್‌ಸಿ–316, ಕೊಂಚಾವರಂ ಪೊಲೀಸ್ ಠಾಣೆ, ಕಲಬುರಗಿ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಈ ಹಿಂದೆ ಜೇವರ್ಗಿ ಪೊಲೀಸ್ ಠಾಣೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಕರ್ತವ್ಯದಲ್ಲಿ ದುರ್ನಡತೆ, ನಿರ್ಲಕ್ಷ್ಯತನ, ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

"ನಿಮಗೆ ಯಾವುದೇ ಕರ್ತವ್ಯಕ್ಕೆ ನೇಮಿಸಿದರೂ, ನೀವು ಕರ್ತವ್ಯದ ಮೇಲೆ ಇಲ್ಲದೇ ಇದ್ದರೂ ಕೂಡ ಸಮವಸ್ತ್ರದಲ್ಲಿ ಕಲಬುರಗಿದಿಂದ ಜೇವರ್ಗಿ ವೃತ್ತ ವ್ಯಾಪ್ತಿಯಲ್ಲಿ ಎಲ್ಲಿ ಬೇಕಾದರೂ ಮುಖ್ಯ ರೋಡಿಗೆ ನಿಂತುಕೊಂಡು ಬರ ಹೋಗುವ ವಾಹನಗಳನ್ನು ನಿಲ್ಲಿಸಿ ಚಾಲಕರಿಂದ ಸಾರ್ವಜನಿಕರ ಸಮಕ್ಷಮದಲ್ಲಿಯೇ ಹಣ ವಸೂಲಿ ಮಾಡಿ ಇಲಾಖೆಗೆ ಅಗೌರವ ತರುವಂತೆ ನಡೆದುಕೊಂಡು ಕರ್ತವ್ಯದಲ್ಲಿ ದುರ್ನಡತೆ ಅತೀವ ನಿರ್ಲಕ್ಷ್ಯತನ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು, ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಕಲಬುರಗಿ ಜಿಲ್ಲೆ, ಕಲಬುರಗಿ ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ 27.07.2013ರ ಆದೇಶದಲ್ಲಿ ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂಬರುವ ವಾರ್ಷಿಕ ವೇತನ ಬಡ್ತಿಯ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷಗಳ ಕಾಲ ಮುಂದೂಡಿ, ಸದರಿಯವರ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಪರಿಗಣಿಸಿ ಆದೇಶಿಸಿರುತ್ತಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ ಇವರು ದಿನಾಂಕ 30.11.2013ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಆ.ಪೊ.ಅ.ರವರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರು ತಮ್ಮ ಸಮಜಾಯಿಷಿಯಲ್ಲಿ ತನ್ನ ಹಿರಿಯ ಮಗನಿಗೆ ಅಪಘಾತದಲ್ಲಿ ಬಲಗಾಲು ಮುರಿದಿದ್ದಕ್ಕೆ, ಸದರಿ ಬಲಗಾಲಿನಲ್ಲಿ ರಾಡ್‌ನ್ನು ಅಳವಡಿಸಿದ್ದು, ಅದು ಮೇಲಿಂದ ಮೇಲೆ ಸೆಪ್ಟಿಕ್ ಆಗುತ್ತಿದ್ದು, ಮಕ್ಕಳ ಯೋಗಕ್ಷೇಮ ಮತ್ತು ಉಪಚರಿಸಲು ಆಸ್ಪತ್ರೆಗೆ ಹೋಗಲು ಸಮಯದ ವಿಳಂಬವಾದ ಕಾರಣ ಒಂದೆರಡು ಸಲ ಸಮವಸ್ತ್ರದಲ್ಲಿ ಖಾಸಗಿ ವಾಹನ ಬಳಸಿ ಹೋಗುವುದನ್ನು ನೋಡಿ ಸಾರ್ವಜನಿಕರು ನಮ್ಮ ಪೊಲೀಸ್ ಇಲಾಖೆಗೆ ಫೋನ್ ಮೂಲಕ ತಿಳಿಸಿರುವುದಾಗಿ ವಿವರಣೆಯನ್ನು ನೀಡಿರುತ್ತಾರೆ. ಹಾಗೂ ಪ್ರಸ್ತುತ ಪ್ರಕರಣದಲ್ಲಿ ಸದರಿ ಆರೋಪಿತ ಅಧಿಕಾರಿಯು ಹಣ ವಸೂಲಿ ಮಾಡಿದ್ದಾರೆ ಎಂಬ ಬಗ್ಗೆ ಪುರಾವೆಯನ್ನು ಶಿಸ್ತು ಪ್ರಾಧಿಕಾರವು ಪರಿಶೀಲಿಸದೇ ಇರುವುದು ಕಂಡು ಬರುವ ಹಿನ್ನೆಲೆಯಲ್ಲಿ ಅರ್ಜಿದಾರರ ಪರಿಷ್ಕರಣ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿ ಶಿಸ್ತು ಪ್ರಾಧಿಕಾರವು ವಿಧಿಸಿರುವ ದಂಡನಾದೇಶವನ್ನು ಮಾರ್ಪಡಿಸುವ ಕುರಿತಂತೆ ಮೇಲೆ ಓದಲಾದ (4)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ: ಒಇ 21 ಪೊಸಿಅ 2014 ಬೆಂಗಳೂರು, ದಿನಾಂಕ: 24.11.2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ನರಹರಿ, ಸಿಹೆಚ್‌ಸಿ–316, ಕೊಂಚಾವರಂ ಪೊಲೀಸ್ ಠಾಣೆ, ಕಲಬುರಗಿ ಜಿಲ್ಲೆ ಇವರಿಗೆ ಶಿಸ್ತು ಪ್ರಾಧಿಕಾರವು ವಿಧಿಸಿರುವ ದಂಡನೆಯನ್ನು ಮಾರ್ಪಡಿಸಿ ಇವರಿಗೆ **"ವಾಗ್ದಂಡನೆ"** (censure)ಯನ್ನು ವಿಧಿಸಿ ಸದರಿಯವರ ಅಮಾನತ್ತಿನ ಅವಧಿಯನ್ನು ಅವರ ಹಕ್ಕಿನಲ್ಲಿರುವ ರಜೆಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜೆ.ಡಿ. ಮಧುಚಂದ್ರ ತೇಜಸ್ವಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

PR. 866

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ನರಹರಿ, ಸಿಹೆಚ್‌ಸಿ–316, ಕೊಂಚಾವರಂ ಪೊಲೀಸ್ ಠಾಣೆ, ಕಲಬುರಗಿ ಜಿಲ್ಲೆ ಇವರ ಪರಿಷ್ಕರಣ ಮೇಲ್ಮನವಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಕಲಬುರಗಿ ಜಿಲ್ಲೆ, ಕಲಬುರಗಿ ಇವರ ಆದೇಶ ಸಂಖ್ಯೆ: ಪಿಆರ್/205/ಗು/2012 (ಡಿಓಬಿ ಸಂ. 1405/2013) ದಿನಾಂಕ 20.07.2013

2) ಮೇಲ್ಮನವಿ ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಕಲಬುರಗಿ ಇವರ ಆದೇಶ ಸಂಖ್ಯೆ: ಅಪೀಲು/84/ಈವ/2013/1921 (ಆ.ಪು.ಸಂ.557/ಈವ/2013) ದಿನಾಂಕ 28.11.2013

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 01.02.2014

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)94/2013–14 ದಿನಾಂಕ: 02.06.2014

5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 139 ಸಿಎನ್‌ಎಸ್ 2014 ದಿನಾಂಕ: 18.09.2014

ಪ್ರಸ್ತಾವನೆ:

ಶ್ರೀ ನರಹರಿ, ಸಿಹೆಚ್‌ಸಿ–316 (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಕೊಂಚಾವರಂ ಪೊಲೀಸ್ ಠಾಣೆ, ಗುಲ್ಬರ್ಗಾ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಕರ್ತವ್ಯದಲ್ಲಿ ದುರ್ನಡತೆ, ನಿರ್ಲಕ್ಷ್ಯತನ, ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

"ಠಾಣೆ ದಿನಚರಿ ಕರ್ತವ್ಯದಲ್ಲಿದ್ದಾಗ ಠಾಣೆ ಬಿಟ್ಟು ಹೊರಗಡೆ ಹೋಗಿ ರೋಡಿನ ಮೇಲೆ ಸಂಚರಿಸುತಿದ್ದ ಆಟೋಗಳನ್ನು ನಿಲ್ಲಿಸಿ, ಚಾಲಕರನ್ನು ಹೆದರಿಸಿ ಹಣ ವಸೂಲಿ ಮಾಡಿ ಅಸಹ್ಯವಾಗಿ ವರ್ತಿಸಿ ಕರ್ತವ್ಯದಲ್ಲಿ ದುರ್ನಡತೆ ನಿರ್ಲಕ್ಷ್ಯತನ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುತ್ತೀರಿ."

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು, ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಕಲಬುರಗಿ ಜಿಲ್ಲೆ, ಕಲಬುರಗಿ ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ 20.07.2013ರ ಆದೇಶದಲ್ಲಿ ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂಬರುವ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಆರು ತಿಂಗಳುಗಳ ಕಾಲ ಮುಂದೂಡಿ ಆದೇಶಿಸಿರುತ್ತಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಕಲಬುರಗಿ ಇವರು ದಿನಾಂಕ 28.11.2013ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಆ.ಪೊ.ಅ.ರವರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪ್ರಸ್ತುತ ಪ್ರಕರಣದಲ್ಲಿ ಶಿಸ್ತು ಪ್ರಾಧಿಕಾರವು ತನ್ನ ಆದೇಶದಲ್ಲಿ ದಿನಾಂಕ 28.10.2012ರಂದು ನಡೆದ ಒಂದು ಘಟನೆಯನ್ನು ಉಲ್ಲೇಖಿಸಿ ದಂಡನೆಯನ್ನು ನೀಡಿದೆ. ಇದು ನ್ಯಾಯಸಮ್ಮತವಾಗುವುದಿಲ್ಲ. ಇದೇ ಘಟನೆಯನ್ನು ದೋಷಾರೋಪಣ ಪಟ್ಟಿಯಲ್ಲಿ ನಮೂದಿಸಿ, ಆರೋಪಿತ ಪೊಲೀಸ್ ಅಧಿಕಾರಿಗೆ ಅದರ ಬಗ್ಗೆ ಸಮಜಾಯಿಷಿ ನೀಡಲು ಅವಕಾಶ ನೀಡಬೇಕಾಗಿತ್ತು. ಈ ಹಿನ್ನೆಲೆಯಲ್ಲಿ ಶಿಸ್ತು ಪ್ರಾಧಿಕಾರದ ದಿನಾಂಕ 20.07.2013ರ ದಂಡನಾದೇಶವು ದೋಷಪೂರಿತವಾಗಿದೆ ಹಾಗೂ ಸಾಮಾನ್ಯ ನ್ಯಾಯದ ತತ್ವಗಳಿಗೆ ವಿರುದ್ಧವಾಗಿದೆ. ಈ ಹಿನ್ನೆಲೆಯಲ್ಲಿ ಅರ್ಜಿದಾರರ ಪರಿಷ್ಕರಣ ಮೇಲ್ಮನವಿಯನ್ನು ಪುರಸ್ಕರಿಸಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಮಾರ್ಪಡಿಸುವ ಕುರಿತಂತೆ ಮೇಲೆ ಓದಲಾದ (4)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ: ಒಇ 22 ಪೊಸಿಅ 2014 ಬೆಂಗಳೂರು, ದಿನಾಂಕ: 24.11.2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ನರಹರಿ, ಸಿಹೆಚ್‌ಸಿ–316, ಕೊಂಚಾವರಂ ಪೊಲೀಸ್ ಠಾಣೆ, ಕಲಬುರಗಿ ಜಿಲ್ಲೆ ಇವರಿಗೆ ಶಿಸ್ತು ಪ್ರಾಧಿಕಾರವು ವಿಧಿಸಿರುವ ಆದೇಶವನ್ನು ರದ್ದುಗೊಳಿಸಿದೆ ಹಾಗೂ ಆರೋಪದಿಂದ ದೋಷಮುಕ್ತರನ್ನಾಗಿ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜೆ.ಡಿ. ಮಧುಚಂದ್ರ ತೇಜಸ್ವಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

PR. 867

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59